ಕಟ್ಟೆ

ಹಳ್ಳಿಯ ಪುಟ್ಟ ಪತ್ರಿಕೆ

16.03.2008
ಭಾನುವಾರ
20 ಪುಟಗಳು
(ನೆಟ್ ಆವೃತ್ತಿ)

ಒಳಪುಟಗಳಲ್ಲಿ.....

1. ವಾರದ ಸುದ್ದಿ : ಹಾಲಿನ ದರ ಪುನಃ ಹೆಚ್ಚಳ
ಕಟ್ಟೆ ವಿಶೇಷ : ಅಳಿಯುತ್ತದೆಯೇ ಆಲೆಮನೆ
(–ಆರ್.ಶರ್ಮಾ)

2. ಹರಟೆ : ಹಣ ಹಣ
(–ಆರ್ಶ)

3. ಸಂಪಾದಕೀಯ : ಕೈ ಕೆಸರಾದರೆ ಬಾಯಿ ಮೊಸರೆಂಬ ಹಿರಿಯರ ಅನುಭವ
(–ಆರ್.ಶರ್ಮಾ, ತಲವಾಟ)

4. ಕಟ್ಟೆಗೆ ಮರುಧ್ವನಿ, ಚಿತ್ರ ಚಮತ್ಕಾರ, ಪದ ವಿನೋದ (–ಸುಮಂತ ಆರ್.)
ಕೃಷಿ ಮಾಹಿತಿ : (–ಜಗದೀಶ ಕೆ.)

5–8. ನೆಟ್ ಫೋಟೋಗ್ಯಾಲರಿ : ಆಲೆಮನೆ ಸಂಭ್ರಮ
(–ಆರ್.ಶರ್ಮಾ, ತಲವಾಟ)

9–13. ಕಥಾಕಟ್ಟು : ಸನ್ಯಾಸಿ ಮತ್ತು ಸತ್ಯ
(–ನಾಗರಾಜ ಮತ್ತಿಗಾರ)

14–17 ಧಾರಾವಾಹಿ : ಒಂದು ಜೇನಿನ ಹಿಂದೆ
(–ಆರ್.ಶರ್ಮಾ, ತಲವಾಟ)

18–20 ಕ್ರೀಡಾ ನೋಟ : ಸಚಿನ್ ನಿವೃತ್ತಿ..!!?
(–ಮಾ.ವೆಂ.ಸ.)

ಕಟ್ಟೆ

ಹಳ್ಳಿಯ ಪುಟ್ಟ ಪತ್ರಿಕೆ

ಪುಟ–20

(ನೆಟ್ ಆವೃತ್ತಿ)

Rs.120 Yly

ಸಂಪುಟ–2 ಸಂಚಿಕೆ–21 ಭಾನುವಾರ 16-03-08

ಮಂಕುತಿಮ್ಮನ ಕಗ್ಗದಿಂದ–

ಪರಿಪರಿಯ ರೂಪಕಾಂತಿಗಳ ಕಣ್ಣಾಗಿಸುವ ।
ಪರಿಪರಿಯ ಫಲಮಧುರಗಳ ರಸನೆಗುಣಿಪ ॥
ಪರಿಪರಿಯ ಕಂಠರವಗಳ ಕಿವಿಗೆ ಸೋಕಿಸುವ ।
ಗುರು ಸೃಷ್ಟಿ ರಸಿಕತೆಗೆ_ಮಂಕುತಿಮ್ಮ ॥

ವಾರದ ಸುದ್ದಿ :

ಹಾಲಿನ ದರ ಪುನಃ ಹೆಚ್ಚಳ

ತಲವಾಟ ಫೆಬ್ರವರಿ–1 : ನಂದಿನಿ, ಶಿವಮೊಗ್ಗ ಹಾಲು ಒಕ್ಕೂಟ, ತಾ॥: 13–3–08 ರಿಂದ ಜಾರಿಗೆ ಬರುವಂತೆ ಹಾಲಿನ ದರವನ್ನು ಪರಿಷ್ಕರಿಸಿದೆ. ಕಳೆದ ಒಂದು ವರ್ಷದಿಂದ 4 ಸಲ ಹಾಲಿನದರವನ್ನು ಏರಿಸಲಾಗಿದೆ.

'ಕನಿಷ್ಟ 3.5 ಜಿಡ್ಡು ಮತ್ತು 8.5 ಎಸ್.ಎನ್.ಎಫ್ ಇರುವ ಹಾಲಿನ ಪ್ರತಿ ಲೀ.ಗೆ ದರ 13.20 ರೂ.ಗೆ ಏರಿಸಲಾಗಿದ್ದು' ಇದು ಪುನಃ ಉತ್ಪಾದಕರಿಗೆ ಪ್ರೋತ್ಸಾಹಕರ ಸಂಗತಿಯಾಗಿದೆ.

ಎಂದಿನಂತೆ ಉತ್ಪಾದಕರು ಉತ್ತಮ ಗುಣಮಟ್ಟದ ಹಾಲನ್ನು ಸಂಘಕ್ಕೆ ನೀಡಿ, ಉತ್ತಮ ದರದ ಸದುಪಯೋಗ ಪಡೆಯಲು ಕೆ.ಎಂ.ಎಫ್. ಕೋರಿದೆ.

ಆಲೆಮನೆ ಸಂಭ್ರಮ

ಕಟ್ಟೆ – ವಿಶೇಷ

ಅಳಿಯುತ್ತದಯೇ ಆಲೆಮನೆ.....?

–ಆರ್.ಶರ್ಮಾ, ತಲವಾಟ

ಡಬ್ಬಿ ಬೆಲ್ಲ ಬಳಸದ ಮಲೆನಾಡಿನ ಮನೆಗಳೇ ಇಲ್ಲ. ಊಟಕ್ಕೆ ಉಪ್ಪಿನ ಕಾಯಿಯಂತೆ ಬೆಲ್ಲ ಬಳಸುವವರೂ ಸಿಗುತ್ತಾರೆ ಇಲ್ಲಿ. ಬಿಸಿಲಿನ ಬೇಗೆಯ ತಂಪಿಗೆ ನೀರುಬೆಲ್ಲ ಹಲವರ ಅಭ್ಯಾಸ. ನಿತ್ಯ ಸವಿಯುವ ಬೆಲ್ಲದ ಮಧುರ ಸವಿಯಂತಯೇ ವರ್ಷಕ್ಕೊಮ್ಮೆ ಆಲೆಮನೆಯ ಕಬ್ಬು, ಕಬ್ಬಿನ ಹಾಲು ಹಾಗೂ ನೊರೆಬೆಲ್ಲದಲ್ಲಿಯೂ ಮಜ ಇದೆ. ಅದನ್ನು ಅನುಭವಿಸಿದವರು ಮಾತ್ರ ಬಲ್ಲರು.

ಮಾರ್ಚ್ ತಿಂಗಳನಲ್ಲಿ ಹೆಚ್ಚು ಕಬ್ಬು ಒಂದೆಡೆ ಸಿಗುವ ಜಾಗದಲ್ಲಿ ಮಣಭಾರದ ಕಣೆ ಹಾಗೂ ಫಟ್ಟದ ಕೆಳಗಿನ ಕೋಣ ಬರುತ್ತದೆ. ಅಲ್ಲಿಂದ ತಿಂಗಳುಗಟ್ಟಲೆ ಆ ಭಾಗದ ಜನರಿಗೆ ಆಲೆಮನೆಯ ಮಜ. ಶಾಲೆಯ ಮಕ್ಕಳಗಂತೂ ಆಲೆಮನೆಯೆಂದರೆ ಸ್ವರ್ಗ. ಶಾಲೆ ಬಿಟ್ಟ ಸಂಜೆಗಳು ಆಲೆಮಾವನ ಬಳಿ ಹುಸಿಬೆದರಿಕೆಯನ್ನು ಎದುರಿಸುತ್ತಾ ಕಬ್ಬು ತಿನ್ನದ ದಿನಗಳಿಲ್ಲ. ನೊರೆಹಾಲು ಹಾಗೂ ಅಕಸ್ಮಾತ್ ಸಿಗುವ ಮಾವಿನ ಮಿಡಿ ಚಪ್ಪರಿಸುತ್ತಾ ಕುಡಿದು ಅಳ್ಳಟ್ಟೆ ಸಿಪ್ಪೆಯಲ್ಲಿ ಮೊಗೆದು ಕೊಡುವ ನೊರೆಬೆಲ್ಲ ಮೆದ್ದರೆ ಅದರ ಸ್ವಾರಸ್ಯವೇ ಬೇರೆ ಬಗೆಯದು. ಅದೆಷ್ಟು ಜನರು ಕಬ್ಬು, ಹಾಲು ತಿಂದುಕುಡಿದರು ಒಂದಿನಿತೂ ಬೇಸರಿಸಿದೆ ಆಲೆಮನೆಗೆ ಬರುವವರು ನನ್ನ ಅತಿಥಿಗಳು ಎಂದೆಣಿಸುವ ಕಬ್ಬಿನ ಒಡೆಯ ರೈತ ಅತಿಥಿದೇವೋಭವ ಎನ್ನುವ ವಾಕ್ಯಕ್ಕೆ ಅರ್ಥಪೂರ್ಣವೆನಿಸುತ್ತಾನೆ. ಆದರೆ ಯಾಂತ್ರೀಕರಣದ ಭರಾಟೆಯ ಇಂದಿನ ದಿನಗಳಲ್ಲಿ ಈ ಸಾಂಪ್ರಾದಾಯಿಕ ಆಲೆಮನೆಗಳು ನಿಧಾನವಾಗಿ ಕಣ್ಮರೆಯಾಗುವತ್ತ ಹೊರಟಿದೆ. ಅಕ್ಕಿ ಮಿಲ್ಲಿನಂತೆ ಯಂತ್ರದ ಆಲೆಮನೆಗಳು ಆಲೆಮಾವನ ಮತ್ತು ಕೋಣನ ತುತ್ತು ಕಸಿಯುತ್ತಿದೆ ಜೊತೆ ಜೊತೆಯಲ್ಲಿಯೇ ರೈತನನ್ನು ವ್ಯಾಪಾರಿಕರಣಕ್ಕೆ ಒಳಪಡಿಸಿ ಸಾಂಪ್ರದಾಯಿಕ ಆಲೆಮನೆಯ ಸೊಬಗನ್ನು ನಿಲ್ಲಿಸುತ್ತಿದೆ. ಸಂಪೂರ್ಣ ನಿಲ್ಲುವ ಮೊದಲು ಅದೊಂದು ಸುಖ ಅನುಭವಿಸುವವನು ಸುಖಿ. □

Statement about ownership and other particulars of Katte weekly, Talavata, Sagar shimoga as required under Rule 8 of the Registration of Newspapers (Central) Rules 1956.

Form-IV

(See Rule 8)

1. Place of publication : Talavata (Sagar Tq.)
2. Periodically : Weekly
3. Printer's Name : Raghavendra sharma K.L.
   whether citizen of India? : Yes
   Address : Raghavendra Sharma K.L.
   s/o Lakshminarayana Bhat,
   Kadavinamane, Post :Talavata - 577421,
   Sagar Tq, Shimoga Dist. Karnataka.
4. Publisher's Name : Raghavendra sharma K.L.
   whether citizen of India? : Yes
   Address : Raghavendra Sharma K.L.
   s/o Lakshminarayana Bhat,
   Kadavinamane, Post :Talavata - 577421,
   Sagar Tq, Shimoga Dist. Karnataka.
5. Editor's Name : Raghavendra sharma K.L.
   whether citizen of India? : Yes
   Address : Raghavendra Sharma K.L.
   s/o Lakshminarayana Bhat,
   Kadavinamane, Post :Talavata - 577421,
   Sagar Tq, Shimoga Dist. Karnataka.

I, Raghavendra Sharma K.L., hereby declare that the particulars given are true to the best of my knowledge and belief.

Date : 16th March 2008.

S/d-
Raghavendra Sharma K.L.

ಹಣ ಮತ್ತು ಹೆಣ....

ಹಣಹಣವೆಂದರೆ ಹೆಣವೂ ಬಾಯ್ತೆರೆದೀತು ಎನ್ನುವುದು ಹಳೆಯ ಮಾತು. ಈಗ ಹೆಣದಿಂದಲೇ ಹಣ ಸಂಗ್ರಹಿಸಿ ಅದಕ್ಕೂ ಒಂದು ಪಾಲು ಕೊಡುವ ಕಾಲ! ಹಲವರಿಗೆ ಹಣ ಸಂಪಾದನೆಯ ಒಂದೊಂದೇ ದಾರಿಗಳು ಮುಚ್ಚುತ್ತಾ ಹೋದಿ ಹಣ ಖಾಲಿ ಮಾಡಲು ಹೆಚ್ಚು ಹೆಚ್ಚು ಮಾರ್ಗಗಳು ಕಾಣಿಸುತ್ತಾ ಹೋದಿವೆ. ಆದರೆ ಇನ್ನು ಕೆಲವರಿಗೆ ಹಣವನ್ನು ಖರ್ಚು ಮಾಡುವುದು ಹೇಗೆಂಬ ಚಿಂತೆಯೂ ಇದ್ದಂತಿದೆ.

ಅಮೇರಿಕಾದ ಒಬ್ಬ ಭೂಪ ತನ್ನ ಕಕ್ಕಸ್ಸುಮನೆಯನ್ನು ಬಂಗಾರಮಯ ಮಾಡಿದ್ದಾನಂತೆ. ಅಲ್ಲಿ ಹೆಚ್ಚು ಸಮಯ ಕಳೆಯುವ ಅಭ್ಯಾಸವಿದ್ದವರು ಸಣ್ಣ ಮರಳು ಕಾಗದ ಜತೆಯಲ್ಲಿ ಒಯ್ದರೆ ವಿಸರ್ಜನೆಯ ಜತೆ ಸಂಪಾದನೆಯೂ ಆದಂತೆ. ಅವೆಲ್ಲಾ ಇರಲಿ ಹೆಣದ ಹಣದ ವಿಚಾರಕ್ಕೆ ಬಂದರೆ ಇಂಗ್ಲೇಂಡಿನ ಒಬ್ಬಾತ ಹೆಣವನ್ನು ನಿರಂತರ ಕಾಯ್ದಿರಿಸುವ ಅಂಗಡಿ ತೆರೆಯುತ್ತಿದ್ದಾನಂತೆ. ನಿಗದಿತ ವೊತ್ತ ಪಾವ್ತಿಸಿದರೆ ನಿಮ್ಮ ಮರಿಮಕ್ಕಳ ಮಕ್ಕಳು ನಿಮ್ಮನ್ನು ನೋಡಬಹುದು ಆದರೆ ಅಷ್ಟು ಹಣ ಬೇಕು ಹೆಣಕ್ಕೆ.

–ಆರ್ಶ.

"ಕೈ ಕೆಸರಾದರೆ ಬಾಯಿ ಮೊಸರೆಂಬ ಹಿರಿಯರ ಅನುಭವ ಸತ್ಯ... ಅದ ನೆನಪಿಡಬೇಕು ನಿತ್ಯ".....

ಕನ್ನಡ ಚಲನಚಿತ್ರವೊಂದರಲ್ಲಿ ರೈತನ ಪಾತ್ರಧಾರಿ ಹಾಡುತ್ತ ಕುಣಿಯುವುದನ್ನು ನೋಡಿದ್ದೇವೆ. ಆದರೆ ಇವತ್ತಿನ ಪ್ರಪಂಚ ಕೇವಲ ಕೈ ಕೆಸರಾದರೆ ಮಾತ್ರ ಸಾಲದು, ನಿಮ್ಮ ಕೈ ಕೆಸರಾಗಿದೆ ಎಂದು ಸಾಬೀತುಪಡಿಸಿ ಎಂದು ರೈತರನ್ನು ಕೇಳುತ್ತಿದೆ. ಏನನ್ನು ಸಾಬೀತು ಪಡಿಸುವುದು ಮತ್ತು ಅದು ಹೇಗೆ ಮುಂತಾದವುಗಳನ್ನು ತಿಳಿಯಲು ಇಂದಿನ ರೈತರು ಜಾಗತಿಕ ಜಗತ್ತಿನತ್ತ ಹೊರಳಿ ನೋಡಬೇಕಾಗಿದೆ. ಮಲೆನಾಡಿನ ಈ ಭಾಗದ ರೈತರುಗಳು ತಲೆತಲೆಮಾರುಗಳಿಂದ ಸಾವಯವ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ರಸಗೊಬ್ಬರಗಳ ಹಾಗೂ ಕ್ರಿಮಿನಾಶಕಗಳ ಬಳಕೆ ಅತಿ ವಿರಳವೆಂದು ಹೇಳಬಹುದು. ಅಡಿಕೆ, ವೆನಿಲ್ಲಾ, ಕಾಳುಮೆಣಸು, ಹಾಗೂ ಏಲಕ್ಕಿ ಮತ್ತು ಕಾಫಿ ಬೆಳೆಗಾರರಾದರೆ ಬೋರ್ಡೋ ಹಾಗೂ ಭತ್ತದ ಬೆಳೆಗಾರರಾದರೆ ಸ್ವಲ್ಪಮಟ್ಟಿಗಿನ ರಾಸಾಯನಿಕ. ಅದರ ಹೊರತಾಗಿ ಮಿಕ್ಕೆಲ್ಲಾ ಸಂಪೂರ್ಣ ಸಾವಯವ. ಈ ಬಳಕೆ ನಿಜವಾದರೂ ಅದಕ್ಕೆ ಪುರಾವೆಗಳಿಲ್ಲ. ನಾನು ಸಾವಯವ ಎಂದು ಬಾಯಿಮಾತಿನಲ್ಲಿ ಹೇಳುವ ರೈತನ ಮಾತನ್ನು ಅಮೆರಿಕಾದಲ್ಲಿಯೋ ಆಸ್ಟ್ರೇಲಿಯಾದಲ್ಲಿಯೋ ಇರುವ ಗ್ರಾಹಕ ನಂಬಲು ಅಥವಾ ನಂಬಿಸಲು ಆಗುವುದಿಲ್ಲ. ಆದ್ದರಿಂದ ತಾನು ರಾಸಾಯನಿಕರಹಿತ ಕೃಷಿಕ ಎಂಬುದನ್ನು ಆತ ಪ್ರಮಾಣಪತ್ರಗಳ ಮುಖಾಂತರ ಸಾಬಿತುಪಡಿಸಬೇಕು. ಆ ಪತ್ರದ ಆಧಾರದ ಮೇಲೆ ಕೃಷಿಕನಿಗೆ ಸಾವಯವ ರೀತಿಯಲ್ಲಿ ಬೆಳೆದ ಪದಾರ್ಥಗಳಿಗೆ ಪ್ರಸ್ತುತ ಮಾರುಕಟ್ಟೆಯ ದರಕ್ಕಿಂತ ಹೆಚ್ಚಿನ ದರ ಸಿಗುತ್ತದೆ. ಅದಕ್ಕಾಗಿ ರೈತರು ಪ್ರಮಾಣಪತ್ರವನ್ನು ಹೊಂದಬೇಕು. ನಿಗದಿತ ಸಂಸ್ಥೆಗಳು ಪ್ರಮಾಣಪತ್ರಕ್ಕೆ ಒಂದಿಷ್ಟು ನಿಯಮಗಳನ್ನು ಪಾಲಿಸುವಂತೆ ರೈತರಿಗೆ ಮಾರ್ಗದರ್ಶನ ನೀಡಿ ಹತ್ತರಿಂದ ಮೂವತ್ತು ಸಾವಿರದವರೆಗೆ ರೈತರಿಂದ ಹಣ ಕಟ್ಟಿಸಿಕೊಂಡು ಕೃಷಿಭೂಮಿಯನ್ನು ಪರಿಶೀಲಿಸಿ ಪ್ರಮಾಣಪತ್ರ ನೀಡುತ್ತವೆ. ವಿಪರ್ಯಾಸವೆಂದರೆ ಮೂವತ್ತು ಸಾವಿರ ಹಣವಿದ್ದರೆ ಇಂದಿನ ರೈತ ಒಂದು ವರ್ಷ ಜೀವನ ಮಾಡಬಹುದು, ಪ್ರಮಾಣಪತ್ರಕ್ಕೆಲ್ಲಿ ಹಣ ಎಂಬ ಪ್ರಶ್ನೆ ಕಾಡುತ್ತದೆ. ಅದಕ್ಕೆ ಪರಿಹಾರವಾಗಿ ಮೈಸೂರಿನ ಇಸ್ಕಾನ್‌ನ ಅಂಗಸಂಸ್ಥೆಯಾದ ಇಕೋ ಅಗ್ರಿ ಫೌಂಡೇಷನ್ ತನ್ನಲ್ಲಿ ನೊಂದಾಯಿತ ಕೃಷಿಕರಿಗೆ ಉಚಿತವಾಗಿ ಪ್ರಮಾಣಪತ್ರ ಒದಗಿಸುವ ಕೆಲಸಮಾಡುತ್ತಿದೆ.

ಮಂಗಳವಾರ ಬಚ್ಚಗಾರಿನ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ತಾಳಗುಪ್ಪ ಇಡುವಾಣಿ ಸೀಮಾ ಸಂಯುಕ್ತ ಪರಿಷತ್‌ನ ಪದಾಧಿಕಾರಿಗಳು ಈ ಭಾಗದ ಕೃಷಿಕರಿಗೆ ಅನುಕೂಲವಾಗಲೆಂದು ಮಾಹಿತಿ ನೀಡುವ ಒಂದು ದಿನದ ಕಾರ್ಯಾಗಾರ ಏರ್ಪಡಿಸುತ್ತಾರೆ. ಈಗಾಗಲೆ ಅರ್ಜಿ ತುಂಬಿದ ಕೃಷಿಕರು ಅಂದು ಸಂಪೂರ್ಣ ಮಾಹಿತಿ ಪಡೆದು ತಾವು ಈಗಾಗಲೇ ಪಾಲಿಸುತ್ತಿರುವ ಸಾವಯವ ಕೃಷಿಯನ್ನು ಜಗತ್ತಿಗೆ ತೋರಿಸಿಕೊಡುವುದು ಹೇಗೆಂಬ ವಿಷಯ ತಿಳಿದುಕೊಳ್ಳಬಹುದು.

ಧಾರ್ಮಿಕ ತಳಹದಿಯ ಸಂಘಟನೆಗಳು ಕೃಷಿಕರ ಬೆನ್ನೆಲುಬಾಗಿ ನಿಂತರೆ ಕೃಷಿಕರ ಬಾಳು ಹಸನು ಎನ್ನುವುದಕ್ಕೆ ಇಂತಹ ಕಾರ್ಯಕ್ರಮಗಳೇ ಸಾಕ್ಷಿ.

ಸದುಪಯೋಗದ ದಾರಿತೋರಿಸುವ ಅವರನ್ನು ಹಿಂಬಾಲಿಸಿದರೆ ಯಶಸ್ಸು ತನ್ನಿಂದತಾನೆ.. –ಆರ್ ಶರ್ಮಾ, ತಲವಾಟ.

ಪ್ರಕಟಣೆ :– **ಕಟ್ಟೆ ಎಜುಕೇಷನ್ ಫಂಡ್, ಚಿಂತನ ವಿಕಾಸ ವಾಹಿನಿ, ತಲವಾಟ**

ಜಿ.ನಾರಾಯಣ ಹಾಗೂ ಜಿ.ಮೃತ್ಯುಂಜಯ ಇವರು ನೀಡಿದ ಸಹಾಯಧನದಿಂದ ಅವಶ್ಯಕತೆಯಿರುವ ಎಸ್.ಎಸ್.ಎಲ್.ಸಿ ಹಾಗೂ 2 ನೇ ಪಿ.ಯು.ಸಿ ಓದುತ್ತಿರುವ ನಾಲ್ಕು ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ಲಭ್ಯವಿದೆ.

ಆಸಕ್ತರು ದಿನಾಂಕ 20–3–2008ರೊಳಗೆ ಚಿಂತನ ವಿಕಾಸ ವಾಹಿನಿ, ನಿಗದಿ ಪಡಿಸಿದ ಅರ್ಜಿ ಪಡೆದು, ಅದರಲ್ಲಿ ಕೇಳಲಾದ ವಿವರಗಳನ್ನು ತುಂಬಿ, ಸಲ್ಲಿಸಬೇಕು.

ಅರ್ಜಿಫಾರಂಗಾಗಿ ಸಂಪರ್ಕಿಸಿ : ಪ್ರಕಾಶ್ ಹೆಚ್.ಟಿ, (ತಲವಾಟ ಡೈರಿ) ಬಚ್ಚಗಾರು, ಹೆಚ್.ಕೆ. ಗಣಪತಿ (ಸೊಸೈಟಿ) ತಲವಾಟ.

ಕಟ್ಟೆಗೆ ಮರುಭಟ್ಟಿ :

Sampaadakarige namaskara.

I read your articles in Katteworld. Its really nice. My only suggestion is about "photos". Kindly edit all photos in a proper way and use it in your articles.

Thanks for your great work.

-**Timmanna Bhat,** Honnavar.

ಕಟ್ಟೆ ~ ಕೃಷಿ ಮಾಹಿತಿ :

ಮರಗಳಲ್ಲಿ ಚಿಗುಳಿ (ರೆಡ್‌ಆಂಟ್) ಯ ಕಾಟ ಅತಿಯಾದರೆ, ಆಲೆಮನೆಯಲ್ಲಿ ಸಿಗುವ ಅಳ್ಳಟ್ಟೆ ಸಿಪ್ಪೆಯನ್ನು ತಂದು ಬುಡದಲ್ಲಿ, ಹರವಿದರೆ ಅದರಿಂದ ಚಿಗುಳಿ ತಿಂದು ಬದುಕುವ ಕೆಂಜಿರುವೆಯ (ಕಚ್ಚದ ಕೆಂಪಿರುವೆ) ಸಂಖ್ಯೆ ಹೆಚ್ಚಿ, ಚಿಗುಳಿ ಮಾಯವಾಗುತ್ತದೆ.

–ಜಗದೀಶ್.ಕೆ.

ಚಿತ್ರ ~ ಚಮತ್ಕಾರ –Net help

ಪ್ರತೀವಾರ ಒಂದೊಂದು ಚಮತ್ಕಾರದ ಚಿತ್ರಗಳು ಈ ಅಂಕಣದಲ್ಲಿ ಪ್ರಕಟವಾದಂತೆ, ಈ ವಾರವೂ ಆನೆಯ ಚಿತ್ರವೊಂದಿದೆ. ಆ ಆನೆಗೆ ಇರುವ ಕಾಲುಗಳೆಷ್ಟು.....? ಉತ್ತರ ನಿಮಗೆ ಗೊತ್ತಾಗಿದೆ ಎಂಬುದು ನಮಗೆ ತಿಳಿಯಲು, ಕಟ್ಟೆ ಲೆಟರ್ ಬಾಕ್ಸ್‌ನಲ್ಲಿ ನಿಮ್ಮ ಉತ್ತರವಿರಲಿ.



ಕಟ್ಟೆ–ಪದ ಕಸರತ್ತು :

–ಸುಮಂತ ಆರ್.

ಚದುರಿದ ಅಕ್ಷರಗಳನ್ನು ಸರಿಪಡಿಸಿ. ವೃತ್ತಕ್ಕೆ ಬಂದ ಅಕ್ಷರಗಳನ್ನು ಪಕ್ಕದ ಚೌಕದಲ್ಲಿ ಸರಿಯಾಗಿ ತುಂಬಿರಿ. ಮಾರ್ಚ್–24ರೊಳಗೆ ಉತ್ತರ ತಲುಪಿಸಿ/ಕಟ್ಟೆ ಲೆಟರ್ ಬಾಕ್ಸ್‌ಗೆ ಹಾಕಿ. ಲಾಟರಿ ಮೂಲಕ ಬಹುಮಾನಿತರಾಗಿ.



ಕಡನ್ನದಲಿಕ
ಯಿಹಸಿಲನಕಾ
ಮಗಮಾಲಿನಕ
ಲಿವ್ಯಾಹತಅಬ
ಗರೆವಿನರೋಮ
ಹಬಾಚ್ಚಪಳೆಣ್ಣು

ಕ.ಸಂ.ಉತ್ತರ : ಶ್ರೀ ಮಾರಿಕಾಂಬಾ ಜಾತ್ರೆ

ಉತ್ತರಿಸಿದವರು : ಲಕ್ಷ್ಮೀನಾರಾಯಣ ಭಟ್, ಅನುಜಿತ್, ಚೈತ್ರಾ ಕಲಗಾರು, ಛಾಯಾ, ಸುಜಿತ್, ಪೂಜಾ, ಅಶ್ವಿನಿ ಅಂಶುಮಾಲಿ, ಯು.ಎಸ್.ಎ.

ಬ : ಅಶ್ವಿನಿ, ಅಂಶುಮಾಲಿ, ಯು.ಎಸ್.ಎ.

Reg.No.KARKAN/2006/20083 :Owner, Editor, Publisher & Printer Raghavendra Sharma K.L. Printed at Sri Ganapathi Offsets, Talaguppa, Published at Chintana Vikasa Vahini Talavata, Sagar (Tq.) Shimoga (Dist.), Karnataka State. Annual subscription Rs.120.

ಕಟ್ಟೆ ನೆಟ್ ಫೋಟೋ ಗ್ಯಾಲರಿ

ಗಾಢ ಬೇಸಿಗೆ ಪ್ರಾರಂಭವಾಗುವ ಮುನ್ನ ಮಲೆನಾಡಿನ ಬೆಳೆಗಳ ಸುಗ್ಗಿ ಕಾಲ ಹಂತ ಹಂತವಾಗಿ ಮುಗಿಯುತ್ತದೆ. (ಆದರೆ ಈ ಬಾರಿ 'ಬೇಸಿಗೆ ಕಾಲ' ಎನ್ನಲು ಪ್ರತಿ ತಿಂಗಳೂ ಸುರಿಯುತ್ತಿರುವ ಮಳೆ ಅಡ್ಡಿಪಡಿಸುತ್ತಿದೆ.) ಅಡಿಕೆ, ಬತ್ತ, ಜೋಳ, ಇವುಗಳು ಚಳಿಗಾಲದ ಜೊತೆಜೊತೆಗೆ ಮುಗಿದರೆ, ಎಲ್ಲರ ಬಾಯಿಯಲ್ಲೂ ಸಿಹಿಯನ್ನುಂಟು ಮಾಡುವ ಮಲೆನಾಡ ಬೆಲ್ಲವನ್ನು ಕೊಡುವ ಕಬ್ಬಿನ ಸುಗ್ಗಿಕಾಲ 'ಆಲೆಮನೆ' ಬಹುತೇಕ ಕಡೆ ಮುಗಿಯುತ್ತಿದೆ. ಹೊಸ ಬೆಲ್ಲ ತಯಾರಾಗುತ್ತಿದೆ, ಮಾರಾಟವಾಗಲು ಅಣಿಯಾಗಿ ನಿಂತಿದೆ.

ಈ ವಾರ ಕಬ್ಬು ಬೆಳೆಯ ಸುಗ್ಗಿ ಸಂಭ್ರಮ 'ಆಲೆಮನೆಯ' ದೃಶ್ಯಗಳು ನಿಮ್ಮ ಮುಂದೆ.

ಚಿತ್ರ : ಆರ್.ಶರ್ಮಾ, shreeshum@gmail.com ಬರಹ : ಮಾಧವ venumadhavah@yahoo.com

Photo : R.Sharma

Photo : R.Sharma

ಕೊಪ್ಪರಿಗೆಯಲ್ಲಿ ಕಾಯುತ್ತಿರುವ ಕಬ್ಬಿನ ಹಾಲು,
ನಂತರ ತಯಾರಾಗುವ ರುಚಿ ರುಚಿ ಬೆಲ್ಲ.

ಕಟ್ಟೆಪತ್ರಿಕೆಗೆ ನೀವು ಲೇಖನಗಳನ್ನು ಬರೆಯಬಹುದು,
'ಫೋಟೋಗ್ಯಾಲರಿಗೆ' ಫೋಟೋಗಳನ್ನು ಕಳುಹಿಸಬಹುದು,
'ಕಟ್ಟೆ ಕಥಾಕಟ್ಟು' ವಿಭಾಗಕ್ಕೆ ಕಥೆಗಳನ್ನು ಕಳುಹಿಸಬಹುದು.

ಆಲೆಮನೆಗೆ ಭೇಟಿಕೊಟ್ಟವರು, ತಾವೂ ಖುಷಿಯಿಂದ ಬೆಲ್ಲ ತಯಾರಿಕೆಯನ್ನು ಪರೀಕ್ಷಿಸುತ್ತಿರುವುದು.

Any comments and suggestions about Katte please mail to :

venumadhavah@yahoo.com

or

shreeshum@gmail.com

ಮುಂದಿನ ಪುಟ

'ಕಟ್ಟೆ ಕಥಾಕಟ್ಟು'

ಅಂಕಣದಲ್ಲಿ ಕತೆ

"ಸನ್ಯಾಸಿ ಮತ್ತು ಸತ್ಯ"

ಕಟ್ಟೆ – ಕಥಾ ಕಟ್ಟು

A STORY EVERY WEEK

ಸನ್ಯಾಸಿ ಮತ್ತು ಸತ್ಯ

–ನಾಗರಾಜ ಮತ್ತಿಗಾರ

ಅದು ಹಾವೇರಿ ಹತ್ತಿರದ ನಾದಿರ ಎನ್ನುವ ಊರು. ಏಳು ನೂರಕ್ಕೂ ಹೆಚ್ಚು ಮನೆ ಇರುವ ಪುಟ್ಟ ಹಳ್ಳಿ. ಅಲ್ಲೊಂದು ಹಳೆಯ ದೇವಾಲಯ. ಶೈಲಿ ನೋಡಿದರೆ ಹಂಪಿಯ ಕಾಲದ್ದು. ಬೃಹದೇಶ್ವರ ದೇವಾಲಯ. ಹಲವಾರು ವರ್ಷ ಪೂಜೆಯಿಲ್ಲದೆ ವಿಘ್ನಗೊಂಡಿದ್ದ ದೇವಾಲಯಕ್ಕೆ ಕಾಯಕಲ್ಪ ನೀಡಿದ್ದರು. ಈಗ ನಿತ್ಯ ಪೂಜೆ ಪರಶಿವನಿಗೆ ಅಲ್ಲಿ ನಡೆಯುತ್ತಿತ್ತು. ಈ ದೇಗುಲದ ಪಕ್ಕದಲ್ಲಿಯೇ ಒಂದು ಕಲ್ಲಿನ ಮಂಟಪ. ದಣಿವಾದವರಿಗೆ, ಬಿಸಿಲಿನಲ್ಲಿ ಮೆಂದು ಬಂದ ದನಗಳಿಗೆ ಇದು ವಿಶ್ರಾಂತಿ ಸ್ಥಳ. ಮಂಟಪವಂತೂ ಸದ್ಬಳಕೆಯಾಗುತ್ತಿತ್ತು. ಕಳೆದ ಒಂದು ತಿಂಗಳಿಂದ ಯುವ ಸನ್ಯಾಸಿಯೊಬ್ಬ ಅಲ್ಲಿಯೇ ಯೋಗನಿಷ್ಠನಾಗಿ ಕುಳಿತಿದ್ದ. ಎಷ್ಟು ಹೊತ್ತಿಗೆ ಸ್ನಾನ, ಊಟ ಎನ್ನುವುದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ಸನ್ಯಾಸಿಯ ದಿನಚರಿಯನ್ನು ಊರವರಿಗೆ ಅಭ್ಯಾಸ ಮಾಡಲಾಗಲಿಲ್ಲ. ಹಣ್ಣು ಹಂಪಲನ್ನು ತಂದು ಜನರು ಮಂಟಪದ ಎದುರು ಇಡುತ್ತಿದ್ದರು. ಮರುದಿನ ನೋಡಿದರೆ ಅದು ಹಾಗೆ ಇರುತ್ತಿತ್ತು.

ಅವತ್ತು ಏಕಾದಶಿ ಕತ್ತಲೆಯಿರುವಾಗಲೇ ಪಕ್ಕದಲ್ಲಿರುವ ಹರಿಯುತ್ತಿರುವ ಚಾನಲಲ್ಲಿ ಸ್ನಾನ ಮಾಡಿ ಕೌಪಿನವನ್ನಷ್ಟೇ ಧರಿಸಿ ನೇರ ಗರ್ಭಗುಡಿಯನ್ನು ಪ್ರವೇಶಿಸಿ ಅಖಂಡ ರುದ್ರ ಮಂತ್ರದೊಂದಿಗೆ ಈಶ್ವರನ ಪೂಜೆಯನ್ನು ಮೂರು ಗಂಟೆಗಳ ಕಾಲ ಮಾಡಿದ. ಈ ಮಧ್ಯೆ ಪೂಜೆ ಮಾಡಲು ಬಂದ ಪೂಜಾರಿ ದಂಗಾಗಿ ನುತ. ಕ್ಷಣಾರ್ಧದಲ್ಲಿ ಈ ಸುದ್ದಿ ಕಾಡ್ಗಿಚ್ಚಿನಂತೆ ಊರೆಲ್ಲಾ ಹಬ್ಬಿತು.

ನಾದಿರದ ಊರವರೆಲ್ಲ ಗರ್ಭಗುಡಿಯ ಹೊರಗೆ ನಿಂತು ಸನ್ಯಾಸಿಯ ಪೂಜಾಕ್ರಮವನ್ನು ನೋಡುತ್ತಿದಂತೆ ಮಂಗಳಾರತಿ ಮುಗಿಸಿ ನೇರ ಕಲ್ಲಿನ ಮಂಟಪದಲ್ಲಿ ಕೌಪಿನ ದಾರಿಯಾಗಿಯೇ ಕಣ್ಮುಚ್ಚಿ ಕುಳಿತ. ಊರವರಿಗೆಲ್ಲ ಒಂದು ರೀತಿಯ ಭಯದ ಭಕ್ತಿ ಸನ್ಯಾಸಿಯಲ್ಲಿ ಮೂಡಿತು. ಸಂಜೆ ಸಮಯಕ್ಕೆ ಹಲವಾರು ಜನರು ಹಣ್ಣು ಹಂಪಲನ್ನು ತಂದಿಟ್ಟರು. ಭಜನೆಯನ್ನು ಮಾಡತೊಡಗಿದರು. ಕಣ್ಣನ್ನು ತೆರೆದ ಸನ್ಯಾಸಿ ಮೌನವನ್ನು ಮುರಿದ. "ನಾವು ಇನ್ನೂ ಕೆಲಕಾಲ ಇಲ್ಲೇ ಇರ್ತೇವೆ. ಹೆಸರಿಲ್ಲದ ಸನ್ಯಾಸಿಗಳು ನಾವು. ನಮ್ಮ ಸನ್ಯಾಸಿ ಜೀವನದ ಮೊದಲ ಮೆಟ್ಟಿಲು ಆರಂಭವಾದದ್ದು ಇಲ್ಲಿಂದ. ನೀವು ಸೂಚಿಸಿದ ಹೆಸರಿನಲ್ಲಿಯೇ ನಾವು ಮುಂದೆ ಕರೆಯಲ್ಪಡುತ್ತೇವೆ. ನಮ್ಮ ಪೂರ್ವಾಶ್ರಮದ ಬಗ್ಗೆ ನೀವಾರು ಕೆದಕಬೇಡಿ. ನನಗೂ ಅದರ ಬಗ್ಗೆ ಹೇಳುವ ಅಥವಾ ನೆನಪಿಸಿಕೊಳ್ಳುವ ಆಸಕ್ತಿಯಿಲ್ಲ. ನಮಃಶಿವಾಯ" ಎಂದು ಸನ್ಯಾಸಿ ಮತ್ತೆ ಧ್ಯಾನಾಸಕ್ತನಾದ.

****

ಬಾಹುಲ, ಶಂಕರಭಟ್ಟ ಸುಶೀಲ ದಂಪತಿಗಳ ಎಕಮಾತ್ರ ಪುತ್ರರತ್ನ. ಭಟ್ಟರು ಬೆಂಗಳೂರಿನ ಕಾಲೇಜೊಂದರಲ್ಲಿ ಸಂಸ್ಕೃತ ಉಪನ್ಯಾಸಕರು. ಸುಶೀಲ ಹೈಸ್ಕೂಲ ಟೀಚರ್. ಹಾಗಾಗಿ ಮಗನನ್ನು ಅತ್ಯಂತ ಶಿಸ್ತುಬದ್ಧವಾಗಿ ಬೆಳಸತೊಡಗಿದರು. ನಾಲ್ಕನೇ ವರ್ಷಕ್ಕೆ ಸಂಗೀತಾಭ್ಯಾಸ, ಏಳನೇ ವರ್ಷಕ್ಕೆ ಮಂಡೆ ಬೊಳಿಸಿ ಬಿಟ್ಟು. ಶುದ್ಧ ಶಾಸ್ತ್ರೋಕ್ತ ಉಪನಯನ. ಮಂತ್ರ, ವೇದ, ಉಪನಿಷತ್ ಕಲಿಯಲು ಗೋಕರ್ಣಕ್ಕೆ ಅದು ಶಾಲಾ ರಜಾದಿನಗಳಲ್ಲಿ ಮಾತ್ರ. ಶಾಲೆಯಲ್ಲಿ ಚುರುಕಾಗಿ ಅಭ್ಯಾಸ ಕಲಿಯುವುದಕ್ಕಾಗಿ ಟ್ಯೂಷನ್ ಕಲಿಕೆಗೆ ಸಕಲ ಸೌಕರ್ಯವನ್ನು ಮಗನಿಗೆ ಒದಗಿಸಿದ್ದರು.

–ಮುಂದಿನ ಪುಟಕ್ಕೆ.

ಸನ್ಯಾಸಿ ಮತ್ತು ಸತ್ಯ

–ನಾಗರಾಜ ಮತ್ತಿಗಾರ

ಆಟವಾಡುವ ವಯಸ್ಸಿನ ಬಾಹುಲನಿಗೆ ತೆರಪಿಲ್ಲದ ವಿದ್ಯಾಭ್ಯಾಸ. ಬೆಳಗ್ಗೆ ನಾಲ್ಕಕ್ಕೆ ಎದ್ದು ಸಂಧ್ಯಾವಂದನೆ. ನಂತರ ಓದು. ಟ್ಯೂಷನ್, ಸ್ಕೂಲ್, ಮಂತ್ರಪಠಣ ಈ ರೀತಿಯ ಒತ್ತಡ ಇವನಿಗೆ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿತು. ಬೆಳೆಯುತ್ತಾ ಬೆಳೆಯುತ್ತಾ ತಂದೆ ತಾಯಿಗಳು ಶತ್ರುಗಳಂತೆ ಕಾಣತೊಡಗಿದರು.

ಅನಿವಾರ್ಯವಾಗಿ ತಂದೆತಾಯಿಗಳನ್ನು ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡ ಬಾಹುಲನಿಗೆ ಸಿಟ್ಟು ಮತ್ತು ಮೌನ ರೂಢಿಯಾಯಿತು. ಕಲಿಕೆ ಬೇಡವೆನಿಸತೊಡಗಿತು. ಆದರೆ ಅಪ್ಪ ಅಮ್ಮನ ಒತ್ತಡಕ್ಕಿಂತ ಓದುವುದೇ ಲೇಸು ಎಂದೂ ಅನಿಸಿತು. ಇಂಜಿನಿಯರಿಂಗ್ ಮುಗಿಸಿದ ಉತ್ತಮ ಕಂಪನಿಯಲ್ಲಿ ಒಳ್ಳೆ ನೌಕರಿಯ ದೊರೆಯಿತು. ಆದರೆ ಕೆಲಸದ ಮೇಲೆ ಆಸಕ್ತಿಯಿಲ್ಲ. ತಾಂತ್ರಿಕ ಕೆಲಸವನ್ನು ಯಾಂತ್ರಿಕವಾಗಿ ಮಾಡುತ್ತಿದ್ದ. ಖಾಲಿಯಿರುವ ಸಮಯದಲ್ಲಿ ಅಲೌಕಿಕದ ಕುರಿತಾದ, ಆಧ್ಯಾತ್ಮಿಕ, ಪುರಾಣ, ಭಗವದ್ಗೀತೆ, ಶಿವಸ್ತುತಿಗಳನ್ನು ಅಧ್ಯಯನ ಮಾಡುತ್ತಿದ್ದ. ಜನರ ಸಂಪರ್ಕವನ್ನೇ ಇಷ್ಟ ಪಡದೆ ಏಕಾಂಗಿತನವನ್ನೇ ಇಷ್ಟಪಡುತ್ತಿದ್ದ ಈತನಿಗೆ 'ವಿದುಲಾ' ಎಂಬ ಏಕೈಕ ಗೆಳತಿ ಇದ್ದಳು. ತನ್ನ ಮನಸ್ಸಿನ ಭಾವನೆಗಳನ್ನು ಇವಳೊಂದಿಗೆ ಹಂಚಿಕೊಳ್ಳುತ್ತಿದ್ದ. ಅವಳು ಅಷ್ಟೇ, ಇವನ ಕೆಲವು ಯೋಚನೆಗಳನ್ನು ಖಂಡಿಸುತ್ತ ಹಲವನ್ನು ಆಲಿಸುತ್ತಾ ಆದಷ್ಟು ಉತ್ಸಾಹದಿಂದ ಇರುವಂತೆ ಮಾತುಕತೆಯಾಡುತ್ತಿದ್ದಳು. ಬಾಹುಲ ವಿದುಲಾಳನ್ನು ತಾಯಿಯಂತೆ ಕಾಣುತ್ತಿದ್ದ. ತಂಗಿಯಂತೆ ಪ್ರೀತಿಸುತ್ತಿದ್ದ. ತನ್ನಂತೆ ಅವಳು. ತನ್ನ ಭಾವನೆಯ ಪ್ರತಿರೂಪ ಎಂದುಕೊಂಡಿದ್ದ.

ವಿದುಲಾ ಹೆಣ್ಣಾದರೂ ಗಂಡಿನ ಅಂಶವೇ ಬಹಳವಿತ್ತು. ಡ್ರೆಸ್ಸು ನಡೆನುಡಿ ಎಲ್ಲವೂ ಗಂಡಿನಂತೆ. ಇಂಜಿನಿಯರಾಗಿದ್ದ ಇವಳು, ಪ್ರವಾಸವನ್ನು ಹವ್ಯಾಸವನ್ನಾಗಿ ರೂಢಿಸಿಕೊಂಡಿದ್ದಳು. ಬಾಹುಲನನ್ನು ಬಹಳವಾಗಿ ಇಷ್ಟಪಡುತ್ತಿದ್ದಳು. ಆದರೆ ಅದು ನಿಷ್ಕಲ್ಮಶ ಪ್ರೀತಿ. ಪ್ರತಿಬಿಂಬದಂತ ಪ್ರೇಮ. ಅವನಿಗೆ ನಾನು, ನನಗೆ ಅವನು. ಅದರಲ್ಲಿ ಎಲ್ಲೂ ಕಾಮದ ಲವಲೇಷವು ಇಣುಕಲಿಲ್ಲ. ಒಂದೇ ಆಫೀಸಿನಲ್ಲಿ ಕೆಲಸ. ಅವತ್ತು ಬಾಹುಲ ಆಫೀಸಿಗೆ ಬರಲಿಲ್ಲ. ಆಶ್ಚರ್ಯ! ನೇರ ಬಾಸ್‌ನ ಛೇಂಬರಗೆ ಹೋಗಿ ವಿಚಾರಿಸಿದಳು. ಅದಕ್ಕವರು "ನಿನ್ನೆ ಸಂಜೆ ಕೆಲಸದಿಂದ ತೆರಳುವಾಗ ಕೆಲಸಕ್ಕೆ ರಾಜಿನಾಮೆ ನೀಡಿದ್ದಾನೆ. ಇದು ತಗೊಳ್ಳಿ ನಿಮಗೆ ಒಂದು ಲೇಟರ್ ಕೊಟ್ಟಿದ್ದಾರೆ ಅವರ ಮೊಬೈಲ್, ಪರ್ಸ, ಎಟಿಎಮ್ ಕಾರ್ಡ. ಕಂಪನಿಯಿಂದ ಕೆಲವು ಅಮೌಂಟ್ ಕೊಡಲಿಕ್ಕಿದೆ. ಅದನ್ನು ನಿಮ್ಮ ಅಕೌಂಟ್‌ಗೆ ಹಾಕಲಿಕ್ಕೆ ಹೇಳಿದ್ದಾರೆ" ಎಂದರು. ವಿದುಲಾ ದಿಙ್ಮೂಢಳಾಗಿ ನಿಂತಳು. ಇವಳಿಗೆ ಬುದ್ಧಿ ಬಂದ ಮೇಲೆ ಇಂತಹ ಸಂದಿಗ್ಧ ಸ್ಥಿತಿಯನ್ನು ಎದುರಿಸಿರಲಿಲ್ಲ. ನನ್ನ ಪ್ರತಿಬಿಂಬ ಎಂದುಕೊಂಡ ಬಾಹುಲ ಏನಾದ್ರೂ ಜೀವಕ್ಕೆ ಕುತ್ತು ತಂದುಕೊಂಡಾನೋ? ಎನ್ನಿಸಿಕೊಂಡೆ ಬೆವರಿದಳು, ದುಃಖವಾಯಿತು, ಏನೇ ಆಗಲಿ ಪತ್ರವೊಂದನ್ನು ಇಟ್ಟಿದ್ದಾನಲ್ಲ ನೋಡೋಣ ಎಂದು ಪತ್ರವನ್ನು ತೆರೆದಳು.

ನಮಃ ಶಿವಾಯ

ಆತ್ಮೀಯ ಗೆಳತಿ,

ತಂಗಿಯಂತೆ ನಿನ್ನನ್ನು ಪ್ರೀತಿಸುತ್ತಿದ್ದೆ, ತಾಯಿಯಂತೆ ನೋಡಿದೆ. ಆ ಕಾರಣಕ್ಕಾಗಿ ನಾನಗೆ ಪ್ರಥಮವಾಗಿ ಸಾಷ್ಟಾಂಗ ನಮಸ್ಕರಿಸುತ್ತೇನೆ. ನನಗೆ ಈ ಸೋಗಿನ ಜೀವನ ಬೇಡವೆಂದು ದೂರ ಸಾಗುತ್ತಿದ್ದೇನೆ. ಅಂದರೆ ನಾನು ಸಾಯುತ್ತೇನೆ ಎಂದು ಭಾವಿಸಬೇಡ. ಸತ್ಯವನ್ನು ಹುಡುಕಿ ಹೊರಟಿದ್ದೇನೆ. ಎಲ್ಲಿಗೆ ಹೋಗುತ್ತೇನೆ ಎಂದು ನನಗೂ ಗೊತ್ತಿಲ್ಲ. ಬಹಳ ವರ್ಷದ ಹಿಂದೆಯೇ ನಾನು ಮಾನಸಿಕವಾಗಿ ಸನ್ಯಾಸಿಯಾಗಿದ್ದೆ.

–ಮುಂದಿನ ಪುಟಕ್ಕೆ.

ಸನ್ಯಾಸಿ ಮತ್ತು ಸತ್ಯ

–ನಾಗರಾಜ ಮತ್ತಿಗಾರ

ಇಂದಿನಿಂದ ಬಾಹ್ಯವಾಗಿಯೂ ಮಾನಸಿಕವಾಗಿಯೂ ಸನ್ಯಾಸಿಯಾಗಿದ್ದೇನೆ. ಶಿವಾಶ್ರಮದ ಈಶ್ವರಯೋಗಿಗಳವರಿಂದ ಇಂದು ಬೆಳಗ್ಗೆ ಸನ್ಯಾಸ ದೀಕ್ಷೆಯನ್ನು ಪಡೆದಿದ್ದೇನೆ. ನೀನು ಈ ಪತ್ರ ಓದುವ ಕಾಲಕ್ಕೆ ನಾನೊಬ್ಬ ಸನ್ಯಾಸಿಯಾಗಿರುತ್ತೇನೆ. ಯಾಕೋ ಏನೋ ಗೆಳತಿ ನನ್ನ ತಂದೆ ತಾಯಿಗಳ ಅತಿರೇಕದ ಪ್ರೀತಿಯೇ ವೈರಾಗ್ಯಕ್ಕೆ ಕಾರಣವಾಯಿತೇನೋ? ನಮಗಾಗಿ ಒಂದು ದಿನವು ಬದುಕಲಾಗದ ಜೀವನ ಬೇಸರವಾಯಿತು. ಮತ್ತೊಬ್ಬರನ್ನು ಸಂತೋಷ ಪಡಿಸುವುದೇ ನಮ್ಮ ಜೀವನವಾದರೆ? ಎಲ್ಲವೂ ನಾಟಕ. ಅಸತ್ಯದ ಗೋಪುರದ ಮೇಲೆ ನಾವಿದ್ದೇವೆ ಗೆಳತಿ ಇವೆಲ್ಲ ಅಸಾಧ್ಯವಾಗಿ ಕಾಣತೊಡಗಿತು. ಅಗತ್ಯಕ್ಕಿಂತ ಹೆಚ್ಚು ದುಡಿಮೆ. ಅದನ್ನು ಗಳಿಸುವಾಗ ಮತ್ತಷ್ಟು ಸುಳ್ಳು. ಗೆಳತಿ, ನಾನು ಸತ್ಯದ ಹುಡುಕಾಟಕ್ಕೆ ಹೊರಟಿದ್ದೇನೆ. ನನ್ನ ಹಣವನ್ನು ಅಪ್ಪನ ಹೆಸರಿಗೆ ವರ್ಗಾಯಿಸಿದ್ದೇನೆ. ಬರುವ ಹಣವನ್ನು ನಿನಗೆ, ಅದನ್ನು ನೀನು ಏನುಬೇಕಾದರೂ ಮಾಡು. ಸದ್ಬಳಕೆಯಾಗಲಿ ಎನ್ನುವ ಆಶಯ ನನ್ನದು. ತಿರುಗುವ ಭೂಮಂಡಲದಲ್ಲಿ ತಿರುಗಾಡುವ ನಾವು ಮುಂದೊಂದು ದಿನ ಭೇಟಿಯಾದರೆ ಆಶ್ಚರ್ಯವಿಲ್ಲ. ಕಾಲನ ಲೀಲೆಯಲ್ಲಿ ಮತ್ತೊಮ್ಮೆ ಭೇಟಿಯಾಗುವ ಇಚ್ಛೆ ಇದೆ. ತಂದೆತಾಯಿಗಳಿಗೆ ವಿಷಯ ತಿಳಿಸು. ಋಣವಿದ್ದರೆ ಮತ್ತೆ ಸಿಗುತ್ತೇನೆ ಗೆಳತಿ.

ನಿನ್ನ ಆತ್ಮೀಯ

ಬಾಹುಲ

ಇದನ್ನು ನೋಡಿದ ವಿದುಲಾಳಿಗೆ ಒಮ್ಮೆಲೇ ವಿಪರೀತ ಕೋಪ ಬಂತು... "ಸನ್ಯಾಸಿಯಾದರೆ ಸತ್ಯಾನ್ವೇಷಣೆ ಸಾಧ್ಯವೆ? ಮೂರ್ಖ ಬಹಳಷ್ಟನ್ನು ಅನುಭವಿಸುವ ಪ್ರಾಯ ಇರುವವ ಗಡ್ಡಬಿಟ್ಟು ಗುಡ್ಡ ಹತ್ತುತ್ತಾನೆ ಅಂದರೆ ಅರ್ಥವಿದೆಯೇ? ತಂದೆತಾಯಿಯನ್ನು ಬಿಟ್ಟು ಹೋಗಿ ಧರ್ಮ ಬಿಟ್ಟು ಸಾಗಿದ್ದಾನೆ. ಇವನಿಂದ ಸತ್ಯವನ್ನು ಹುಡುಕಲಿಕ್ಕೆ ಆಗುತ್ತದೆಯೇ? ಮತ್ತೊಂದಷ್ಟು ಸುಳ್ಳಿನ ಬಲೆಯಲ್ಲಿ ಸಿಕ್ಕಿ ಬೀಳುತ್ತಾನೆ ಜೇಡನಂತೆ. ಅವನ ಹಣೆಬರಹ. ಹೋಗಿದ್ದಾನೆ, ಅವನು ಬಯಸಿದ್ದು ದೊರೆಯಲಿ" ಎನ್ನುತ್ತ. ಅವನ ತಂದೆ–ತಾಯಿಗಳಿಗೆ ವಿಷಯ ತಿಳಿಸಿದಳು. ಮತ್ತೆ ಆ ಕಡೆ ಹದಿನೈದು ದಿನ ತಲೆಯನ್ನು ಹಾಕಲಿಲ್ಲ. ಅವರ ದುಃಖವನ್ನು ಇವಳಿಗೆ ನೋಡಲಿಕ್ಕೆ ಆಗಲಿಲ್ಲ. ಅವನ ಖಾತೆಯಲ್ಲಿರುವ ಮತ್ತು ಅವನಿಂದ ಇವಳ ಖಾತೆಗೆ ಬಂದ ಹಣವನ್ನು ತನ್ನ ಕೈಯಿಂದ ಸ್ವಲ್ಪ ಹಣ ಸೇರಿಸಿ ಮಾಡಿ ಅದನ್ನೆಲ್ಲ ಗೆಳೆಯನ ನೆನಪಿಗಾಗಿ 'ಬಾಹುಲ ಮೆಮೋರಿಯಲ್ ಟ್ರಸ್ಟ್' ಮಾಡಿ ಅನಾಥ ಮಕ್ಕಳನ್ನು ದತ್ತು ತೆಗೆದು ಕೊಂಡು ವಿದ್ಯಾದಾನ ಕೇಂದ್ರವನ್ನಾಗಿ ಮಾಡಿದಳು.

****

ವಿದುಲಾಳಿಗೆ ನಲವತ್ತೈದು ಪ್ರಾಯ. ಆದರೂ ಪ್ರವಾಸ ಮಾಡುವ ಹವ್ಯಾಸ ಬಿಟ್ಟಿರಲಿಲ್ಲ. ತನ್ನ ಗಂಡ, ಮಗಳನ್ನು ಕರೆದುಕೊಂಡು ಪ್ರವಾಸಕ್ಕೆ ಹೊರಟವಳು ಇವಳು ಹೋಗುವ ದಾರಿ 'ನಾದಿರ'ವನ್ನು ದಾಟಿ ಹೋಗಬೇಕಿತ್ತು.

ನಾದಿರದ 'ಬೃಹದೇಶ್ವರ ದೇವಾಲಯ' ಕರ್ನಾಟಕದಲ್ಲಿ ಪ್ರಖ್ಯಾತಿಯನ್ನು ಪಡೆದಿತ್ತು. ಕಾರಣ ಅಲ್ಲಿನ ಈಶಾಶ್ರಮದಿಂದಾಗಿ, ಅಲ್ಲಿನ ಪೀಠಾಧಿಪತಿ ಅದೇ ಹಳ್ಳಿಗರಿಂದ ನಾಮಕರಣಗೊಂಡ ಸನ್ಯಾಸಿ ಶ್ರೀಬೃಹದೇಶ್ವರ ಪ್ರಸಾದ ಮಹಾಯೋಗಿಗಳಿಂದಾಗಿ, ನಾದಿರ ಇಂದು ಪ್ರವಾಸಿ ತಾಣ. ಆಧ್ಯಾತ್ಮ ಕೇಂದ್ರ. ಅನ್ನ ದಾಸೋಹದ ಮಹಾಕ್ಷೇತ್ರ. ಎಲ್ಲ ಪತ್ರಿಕೆಗಳಲ್ಲಿ, ಟಿ.ವಿ.ಯಲ್ಲಿ ಇಲ್ಲಿನ ಸಾಧನೆಯನ್ನು ಪ್ರಚಾರ ಮಾಡಿದ್ದರು. ಆದರೆ ಯಾವ ಮಾಧ್ಯಮದವರಿಗೂ ಮಹಾಯೋಗಿಗಳ ಭಾವಚಿತ್ರ ಸಿಕ್ಕಿರಲಿಲ್ಲ.

–ಮುಂದಿನ ಪುಟಕ್ಕೆ.

ಸನ್ಯಾಸಿ ಮತ್ತು ಸತ್ಯ

–ನಾಗರಾಜ ಮತ್ತಿಗಾರ

ಯೋಗಿಗಳ ಆಶಯವು ಅದೇ "ಇಲ್ಲಿನ ಸಾಧನೆಯನ್ನು ಬಿಂಬಿಸಿ, ನಮ್ಮನ್ನಲ್ಲ ಇದೆಲ್ಲ ಶಿವನ ಕೃಪೆ. ಭಕ್ತಾದಿಗಳ ಸಾಧನೆ. ನಾವು ಇಲ್ಲಿ ನಿಮಿತ್ತ ಮಾತ್ರ. ಅದಕ್ಕಾಗಿ ನಮ್ಮನ್ನು ಹೊಗಳಲೂ ಬೇಡಿ. ನಮ್ಮ ಭಾವಚಿತ್ರವನ್ನು ಪ್ರಕಟಿಸಬೇಡಿ" ಎಂಬುದಾಗಿ ಪತ್ರಿಕೆಯವರಲ್ಲಿ ಟಿ.ವಿ.ಯವರಲ್ಲಿ ಹೇಳಿದ್ದರು. ಇವರ ಹೇಳಿಕೆ ರಾಜ್ಯ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. "ಜಗತ್ತಿನ ಸೇವೆಯಲ್ಲಿ ಪ್ರಚಾರ ಬಯಸದ ನಾದಿರದ ಮಹಾಯೋಗಿ"ಎಂದು. ಇದನ್ನು ವಿದುಲಾ ಓದಿದ್ದಳು. 'ಈಶಾಶ್ರಮ' ನಾದಿರ ಎಂಬ ಫಲಕ ಕಂಡೊಡನೆ ಕಾರನ್ನು ಆಕಡೆಯೇ ತಿರುಗಿಸಿದಳು. ಆಶ್ರಮದ ಪರಿಸರ ನೋಡಿ ಸಂತೋಷವಾಯಿತು. ಅಲ್ಲಿನ ವಸತಿ ಗೃಹದಲ್ಲಿ ಉಳಿಯಲು ವ್ಯವಸ್ಥೆ ಮಾಡಿಕೊಂಡಳು.

'ಇಷ್ಟೆಲ್ಲ ಸಾಧನೆ ಮಾಡಿದ ಯೋಗಿಗಳನ್ನು ನೋಡಬೇಕು' ಎಂದು ತಿರ್ಮಾನಿಸಿದಳು. ಭೇಟಿಗಾಗಿ ವಿನಂತಿಸಿಕೊಂಡಳು. ಒಪ್ಪಿಗೆಯು ದೊರೆಯಿತು. ಮಗ ಗಂಡನನ್ನು ಕರೆದು ಕೊಂಡು ಯೋಗಿಗಳ ಆಪ್ತ ಭೇಟಿ ಕೊಣೆಗೆ ಹೋದಳು. 'ನನ್ನ ಹೆಸರು ವಿದುಲಾ. ಇವರು ನನ್ನ ಗಂಡ ವೆಂಕಟಾಚಲ, ಮಗ' ಎಂದು ಪರಿಚಯ ಮಾಡಿಕೊಂಡಳು ಯೋಗಿಗಳಿಗೆ ಒಮ್ಮೆಲೆ ಆನಂದವಾಯಿತು. ಇಪ್ಪತ್ತು ವರ್ಷದ ನಂತರ ಆತ್ಮೀಯ ಗೆಳತಿಯನ್ನು ನೋಡಿ "ಮಿದುಲಾ ನಮ್ಮನ್ನು ಸರಿಯಾಗಿ ನೋಡಿ" ಎಂದಷ್ಟೆ ಅಂದರು. ವಿದುಲಾ ದಿಟ್ಟಿಸಿ ನೋಡಿದಳು. ಒಮ್ಮೆಲೆ ಸಂತೋಷ, ಆಶ್ಚರ್ಯ ಎಲ್ಲವೂ ಆಯಿತು, ಜೊತೆಗೆ ಕೋಪವು ಬಂತು.

"ಬಾಹುಲ !!"

"ನಾವೀಗ ಬಾಹುಲ ಅಲ್ಲ"

"ನೀವು ಹುಡುಕಿಕೊಂಡ ಹೊರಟ ಸತ್ಯ ಸಿಕ್ಕಿತೆ?"

"ಸಿಕ್ಕಿತು ಎನ್ನಬಹುದು"

"ಅಂದರೆ ಪೂರ್ಣ ಸಿಗಲಿಲ್ಲವೆಂದಾಯಿತು?"

"ಆಯಾ ಸಮಯಕ್ಕೆ ನಾವಾಡುವ ಮಾತು. ನಾವು ಮಾಡುವ ಘಟನೆ ಸತ್ಯ. ಅದು ನಡೆಯದೆ ಇದ್ದಿರಬಹುದು. ಮುಂದೆ ನಡೆಯದೆಯೂ ಇರಬಹುದು"

"ಸತ್ಯವೆಂದರೆ ಇಷ್ಟೆ ಆಯಿತು. ಇದನ್ನು ಸಂಸಾರದಲ್ಲಿಯೇ ಇದ್ದುಕೊಂಡು ತಿಳಿದುಕೊಳ್ಳಬಹುದಿತ್ತಲ್ಲ."

"ಸಂಸಾರದಲ್ಲಿದ್ದರೆ ಸಂಯಮದಿಂದಿದ್ದು, ಅದರ ಧರ್ಮಪಾಲನೆ ಮಾಡಬೇಕು. ಸಂಸಾರವನ್ನು ಮಾಡಿಕೊಂಡು ಸನ್ಯಾಸಿಯಂತೆ ಯೋಜನೆ ಮಾಡಬಾರದು. ಅದಕ್ಕೆ ಸನ್ಯಾಸವೇ ಆಗಬೇಕು. ವಿಶ್ವದ ಜ್ಞಾನವನ್ನೆಲ್ಲ ತನ್ನೆಡೆಗೆ ಸೆಳೆದುಕೊಂಡು ಸತ್ಯವನ್ನು ತಿಳಿಯಲಿಕ್ಕೆ ಸನ್ಯಾಸಿಗೆ ಮಾತ್ರ ಸಾಧ್ಯ"

"ಇಷ್ಟೆಲ್ಲ ತಿಳಿದ ಸನ್ಯಾಸಿಗೆ ಸಕಲ ಐಶ್ವರ್ಯಗಳೇಕೆ?"

"ಇದಾವುದು ನಮ್ಮದಲ್ಲ"

"ಅನುಭವಿಸುವವರು ನೀವಲ್ಲವೇ?"

"ಅಲ್ಲ, ನಾವು ಇದನ್ನು ನಮ್ಮದಲ್ಲ ಎಂಬ ಸತ್ಯ ಗೊತ್ತಿರುವುದರಿಂದಲೆ ಪುನಃ ಸಮಾಜಕ್ಕೆ ನೀಡುತ್ತಿದ್ದೇವೆ. ಕೆರೆಯ ನೀರನ್ನು ಕೆರೆಗೆ ಚೆಲ್ಲುತ್ತೇವೆ.

"ಇದೆಲ್ಲ ನಾಟಕವೆನಿಸುವುದಿಲ್ಲವೆ? ಅಸಹ್ಯವಲ್ಲವೆ?"

–ಮುಂದಿನ ಪುಟಕ್ಕೆ.

ಸನ್ಯಾಸಿ ಮತ್ತು ಸತ್ಯ

–ನಾಗರಾಜ ಮತ್ತಿಗಾರ

"ನಾವು ಮಾಡುತ್ತಿರುವುದು ನಾಟಕವಲ್ಲ. ನಮ್ಮಲ್ಲಿಗೆ ಬರುವವರು ನಾಟಕ ಮಾಡುತ್ತಾರೆ. ಅವರಿಗೆ ದ್ವಾರ ಬಾಗಿಲಲ್ಲಿ ಆಥಿತ್ಯ ನೀಡಿ ಕಳಸಲಾಗುತ್ತದೆ. ಆದರೆ ಮತ್ತು ಒಂದು ಸತ್ಯವನ್ನು ಹೇಳುತ್ತೇವೆ, ವಿದುಲಾ, ನಾವು ಇಲ್ಲಿಯೂ ಮತ್ತೊಬ್ಬರ ಸಂತೋಷಕ್ಕಾಗಿಯೇ ಇರಬೇಕು. ಇದು ನಮಗೆ ಕಾಡುತ್ತಿರುವ ಅತ್ಯಂತ ದುಃಖದ ಸಂಗತಿ. ಸಂಸಾರ ಜಂಜಾಟ ಬೇಡವೆಂದು ಬಂದವರು ನಾವು, ಈಗ ನೋಡು ಭಕ್ತರ ಸಂಸಾರವೆಲ್ಲ ನಮ್ಮ ಸಂಸಾರವಾಗಿದೆ. ಸನ್ಯಾಸಿಯ ಸಂಸಾರ ಬಹಳ ದೊಡ್ಡದು. ತಮ್ಮದೆಲ್ಲ ಸಮರ್ಪಣಾಭಾವದಿಂದ ಕಾಣುವ ಭಕ್ತರನ್ನು ಸಂತೋಷಿಸಲೇಬೇಕು. ಅವರ ಸುಃಖದುಃಖದಲ್ಲಿ ಭಾಗಿಯಾಗಲೇಬೇಕು. ಮತ್ತೊಬ್ಬರಿಗೆ ಆಗಲೇಬೇಕು. ಜಗತ್ತು ಬಹಳ ಕಷ್ಟಪಡುತ್ತಿದೆ, ಉಳ್ಳವರು ಎಲ್ಲವನ್ನು, ಏನನ್ನೂ ಮಾಡಬಹುದು. ಆದರೆ ಇಲ್ಲದವರು? ಅದಕ್ಕಾಗಿಯೇ ಗೆಳತಿ ಇನ್ನೂ ಇಲ್ಲಿಯೇ ಇದ್ದೇನೆ. ಉಳ್ಳವರು ನೀಡುವ ಕಾಣಿಕೆ ಇಲ್ಲದವರಿಗೆ ಇಲ್ಲಿ ಊಟವಾಗುತ್ತಿದೆ" ಎನ್ನುವಾಗ ಯೋಗಿಗಳ ಕಣ್ಣಲ್ಲಿ ನೀರಿನ ಹನಿಯಿತ್ತು.

ವಿದುಲಾ ಯೋಗಿಗಳ ಭಾವನೆ ಮತ್ತು ವಾದವನ್ನು ಸ್ವೀಕರಿಸಿದಳು. ತಾನು ಮಾಡಿದ ಟ್ರಸ್ಟ ಕುರಿತು ಹೇಳಿದಳು. ಉಭಯಕುಶಲೋಪರಿ ಮಾತುಕತೆ ನಡೆಯಿತು. ದಂಪತಿಗಳು ಹೊರಡಲು ಅನುವಾದರು. "ವಿದುಲಾ ನಿನ್ನ ಮಗ ನಮಗೆ ಬೇಕು. ನಮ್ಮ ಆಶ್ರಮದಲ್ಲಿಯೇ ಅವನ ಇಷ್ಟವಾದ ವಿದ್ಯೆ ಕಲಿಯಲಿ ಎಂಬುದು ನಮ್ಮ ಆಶಯ. ನಿಮ್ಮ ಅನಿವಾರ್ಯ ಕರ್ತವ್ಯಗಳನ್ನು ಮುಗಿಸಿ ನೀವು ಇಲ್ಲಿಯೇ ಇರಬೇಕೆಂಬ ಬಯಕೆ ನಮ್ಮದು" ಎಂದರು ಯೋಗಿಗಳು. ಸಮ್ಮತಿ ಸೂಚಿಸಿದರು ದಂಪತಿಗಳು.

"ಸತ್ಯ ಹುಡುಕಿ ಹೊರಟ ಗೆಳೆಯ ಸನ್ಯಾಸಿಯಾದ, ಯಾವುದು ಬೇಡ ಎಂದವಗೆ ಎಲ್ಲವು ಗಂಟು ಬಿದ್ದಿದೆ. ಸಂಸಾರ ಸಾಕು ಎಂದವ ಸಾವಿರಾರು ಸಂಸಾರದ ಯಜಮಾನ. ದೊರೆಯಿತೆ ಸತ್ಯದ ಹಾದಿ? ಒಲ್ಲದ ಸಂಸಾರ ಬಂಧನ, ಸನ್ಯಾಸಿಗೆ ಎಂತಹ ವಿಚಿತ್ರ" ಎನ್ನುತ್ತ ಮತ್ತೆ ಇಪ್ಪತ್ತು ವರ್ಷದ ಹಿಂದೆ ವಿದುಲಾಳ ನೆನಪು ಪಯಣದ ಹಾದಿ ಮುಂದೆ ಸಾಗುತ್ತಿತ್ತು.

****

ನಾಗರಾಜ ಮತ್ತಿಗಾರ
ಅಂಚೆ : ಸಂಪಗೋಡ,
ಸಿದ್ದಾಪುರ ತಾ||, (ಉ.ಕ.)
ಮೊಬೈಲ್ : 9916821226.

ಮುಂದಿನ ಪುಟಗಳಲ್ಲಿ..
'ಧಾರಾವಾಹಿ'
'ಒಂದು ಜೇನಿನ ಹಿಂದೆ'

ಧಾರಾವಾಹಿ

ಒಂದು ಜೇನಿನ ಹಿಂದೆ

–ಆರ್.ಶರ್ಮಾ, ತಲವಾಟ

ಉಪ್ಪಾಕೆ ಹಣ್ಣು

(ಮಾರ್ಚ್ 9, 2008ರ ಸಂಚಿಕೆಯಿಂದ..... ಅವರೇನಾದರೂ ಮಾಡಿಕೊಳ್ಳಲಿ ಆದರೆ ತನ್ನನ್ನು ಕಂಡಾಗಲೆಲ್ಲಾ "ಚೆನ್ನಾ ಎಲ್ಲಾದ್ರೂ ಒಂದು ಜೇನ್ ಕಂಡಿದ್ದೀಯಾ" ಎಂದು ಪ್ರಶ್ನೆ ಕೇಳಿದಾಗಲೆಲ್ಲಾ ಮೈ ಉರಿಯುತ್ತಿತ್ತು. ಖರ್ಚಿಗೆ ಐವತ್ತುರೂಪಾಯಿ ಕೊಡಿ ಅಂದ್ರೆ ಅದ್ಯಾವಾಗ್ಲೋ ತನಗೆ ಕೊಟ್ಟಿದ್ದ ನೂರುರೂಪಾಯಿ ನೆಪಹೇಳಿ ಅದರಹಂಗೆ ಮಾಡ್ಬೇಡ ಎಂದು ಹಂಗಿಸುತ್ತಾ ದುಡ್ಡು ಕೊಡೋ ಭಟ್ರಿಗೆ ನಾನು ಪುಗಸಟ್ಟೆ ಜೇನು ಯಾಕೆ ಹುಡುಕಿ ಕೊಡಬೇಕು ಅಂತ ಅನ್ನಿಸುತ್ತಿತ್ತು. ಆದರೆ ಅವರ ಎದುರು ಅನ್ನಲಾಗದೆ ಏನಾದರೂ ಒಂದು ಸಬೂಬು ಹೇಳಿ ತಪ್ಪಿಸಿಕೊಳ್ಳುತ್ತಿದ್ದುದು ನೆನಪಾಗಿ ಒಳಗೊಳಗೆ ನಗುಬಂತು. .....ಮುಂದಕ್ಕೆ)

ಒಟ್ಟಿನಲ್ಲಿ ಅದೆಲ್ಲಾ ಅವರ ಹಣೆಬರಹ, ಯಾರ ಕೈಯಲ್ಲೂ ತಪ್ಪಿಸೋಕಾಗಲ್ಲ ಎಂದು ಆಲೋಚಿಸುತ್ತಾ ಚೀಲದ ಬಾಯಿ ಕಟ್ಟುತ್ತಿದ್ದ ಚೆನ್ನನಿಗೆ "ಅಯ್ಯಯ್ಯೋ... ಅಯ್ಯಯ್ಯೋ" ಎಂದು ದೂರದಲ್ಲಿ ಯಾರೋ ಕೂಗಿದಂತೆ ಕೇಳಿಸಿತು. ಮತ್ತೆ ಅತ್ತ ಕಡೆ ಕಿವಿಗೊಟ್ಟು ಆಲಿಸಿದ ಅನಂತರ ಯಾವ ಸದ್ದೂ ಕೇಳಲಿಲ್ಲ. ಯಾರೋ ಸುಮ್ಮನೆ ಕೂಗಿರಬಹುದೆಂದು ಚೀಲ ತಲೆಯ ಮೇಲೆತ್ತಿಕೊಳ್ಳಲು ನೋಡಿದ. ಭರ್ಜರಿ ಭಾರವಾಗಿತ್ತು. ಯಾವುದೋ ಆಲೋಚನೆ ಮಾಡುತ್ತಾ ಹೊರಲಾರದಷ್ಟು ಹಣ್ಣುಗಳನ್ನು ಚೀಲ ತುಂಬಿಕೊಂಡದ್ದಕ್ಕೆ ತನ್ನನ್ನೇತಾನು ಶಪಿಸಿಕೊಂಡ. ಯಾರಾದರೂ ತಲೆಗೆ ಹೊರಿಸುವವರಿದ್ದರೆ ಅದೇನು ಹೊರಲಾರದ ಭಾರವಾಗಿರಲಿಲ್ಲವಾದರೂ ಒಬ್ಬನೇ ತಲೆಗೆ ತೆಗೆದುಕೊಳ್ಳುವುದು ಕಷ್ಟವಾಗಿತ್ತು. ಯಾರೋ ಮೂರ್ನಾಲ್ಕು ಜನ ಹೆಣ್ಣಾಳು ಕನ್ನರ್ಸೆಭಟ್ಟರ ತೋಟದ ಸೊಪ್ಪಿನ ಬೆಟ್ಟದ ದಾರಿಯಲ್ಲಿ ಹೋಗುತ್ತಿದ್ದುದು ಕಂಡು "ಹೋಯ್ ಯಾರ್ರೋ ಅದು" ಎಂದು ಕೂಗಿದ.

"ನಾವು ಸೊಪ್ಪಿಗೆ ಹೋಗೋರು" ಅವರೂ ಅಲ್ಲಿಂದಲೇ ಕೂಗಿದರು. ಅವರು ಕೆಳಗಡೆ ಇದ್ದಿದ್ದರಿಂದ ಮುಖ ಕಾಣಿಸುತ್ತಿರಲಿಲ್ಲ.

"ಒಂಚೂರು ನಂಗೆ ಈ ಚೀಲ ತಲಿಗೆ ಎತ್ತಿ ಹೋಗ್ರಿ" ಮತ್ತೆ ಕೂಗಿ ಹೇಳಿದ ಚೆನ್ನ.

ಇವನ ದನಿ ಕೇಳಿ ಅವರು ಇತ್ತ ಕಡೆಯೇ ಬಂದರು. ಹತ್ತಿರ ಬಂದಾಗ ನೋಡುತ್ತಾನೆ, ಬಸವಿ ಮತ್ತೆ ಇಬ್ಬರು ಕಾನ್ಮನೆಯ ಹೆಂಗಸರು.

"ಏಯ್ ಚೆನ್ನಣ್ಣ ನೀನು ಇಲ್ಲೇ ಇದೀಯನಾ, ರಾಗು ಭಟ್ರು ನಿನ್ನ ಹುಡುಕ್ತಾ ಇದ್ರು, ನೀನು ಎಲ್ಲಾದ್ರೂ ಕಂಡ್ರೆ ನಾಣಸ್ವಾಮಿ ಭಟ್ರ ಸೊಪ್ಪಿನ ಬೆಟ್ಟದ ಹತ್ರ ಬರಕೆ ಹೇಳು ಅಂದ್ರು" ಬಸವಿ ಚೆನ್ನನ ಬಳಿ ಹೇಳಿದಳು.

"ಅವ್ರು ಸತ್ರು, ಅವ್ರಿಗೆ ಬೇರೆ ಕೆಲ್ಸ ಇಲ್ಲ"

"ಏ ಹಂಗೆಲ್ಲಾ ಎಂತ ಕೆಟ್ಟ ಮಾತಾಡ್ತೀಯಾ, ಅವರು ನಿಂಗೆ ಎಂತ ಮಾಡಿದಾರ"

"ನಂಗೆಂತ ಮಾಡ್ತಾರೆ, ಮತ್ತೆಂತೆ, ಹಗಲೂ ರಾತ್ರಿ ಜೇನು ಕೂಡಿಕೊಡು, ಹುಡುಕಿ ಕೊಡು ಅಂತ ರಗಳೆ. ನೀವೆತ್ಲಾಗೆ ಹೊಂಟ್ರಿ?"

ಚೆನ್ನ ಮತ್ಯಾವ ಸಮಯವಾಗಿದ್ದರೂ ಆವತ್ತು ಬಸವಿ ಮೂರ್ಮನೆ ಕಾನಿನಲ್ಲಿ ಉಪ್ಪಾಕೆಮರ ಇಲ್ಲ ಎಂದಿದ್ದನ್ನು ಹೇಳಿ ಕ್ಯಾತೆ ತೆಗೆಯುತ್ತಿದ್ದ. ಆದರೆ ಈಗ ಮತ್ತೆ ಜಗಳವಾದರೆ ತಲೆಗೆ ಮೂಟೆ ಹೊರಿಸಲು ಯಾರೂ ಇರಲಿಲ್ಲ, ಹಾಗಾಗಿ ಆವತ್ತಿನ ಜಗಳದ ವಿಚಾರ ಇಬ್ಬರೂ ಮರೆತು ವಿಶ್ವಾಸಿಕರಂತೆ ನಡೆದುಕೊಂಡರು.

–ಮುಂದಿನ ಪುಟಕ್ಕೆ.

ಧಾರಾವಾಹಿ

ಒಂದು ಜೇನಿನ ಹಿಂದೆ

ಆರ್. ಶರ್ಮಾ, ತಲವಾಟ

"ಹೆಗಡೇರ ಮನೆ ಗೊಬ್ಬರದ ಗುಂಡಿಗೆ ಸೊಪ್ಪು ಹಾಕ್ತಾ ಇದೀವಿ, ಪಾಪ ಅಲ್ಲಿ ಜೇನು ಹಿಡಿಯಾಕೆ ಆಗ್ದೆ ಒದ್ದಾಟ ಮಾಡ್ತಾ ಇದಾರೆ ಬೇಗ ಹೋಗ ಮಾರಾಯ"

"ಅಡ್ಡಿಲ್ಲಾ ಹೋಗ್ತೀನಿ, ಸ್ವಲ್ಪ ಈ ಚೀಲ ತಲೆಗೆ ಎತ್ತು" ಎಂದು ಬಗ್ಗಿದ, ಚೀಲ ತಲೆಗೆ ಎತ್ತಲು ಬಂದ ಬಸವಿಯ ಬಳಿ,

"ಅದೇನೆ ಇವತ್ತು ಅಪರೂಪಕ್ಕೆ ಹೆಂಗಸರ ಜತೆ ಮಾಡ್ಕೊಂಡು ಹೊಂಟೀದೀಯಲ್ಲ?' ಎಂದು ಸಣ್ಣದಾಗಿ ಹೇಳಿದ.

"ನಿಂಗೆ ಯಾವಾಗ್ಲೂ ತಮಾಸಿ, ಅಲ್ಲಿ ಊರಲ್ಲಿ ಹೆಣ್ತಿ ಎದುರು ಪೌರುಸ ನೋಡಿದ್ರೆ ಬಡದು ಬುಡಾನಾ ಅನಿಸ್ತದೆ" ಎನ್ನುತ್ತಾ ಉಪ್ಪಾಕೆ ಚೀಲವನ್ನು ಚೆನ್ನನ ತಲೆಯ ಮೇಲೆ ಇಟ್ಟು "ಏ ದರಿದ್ರದವನೇ ಕನ್ನರ್ಸೆ ಭಟ್ರಮನೆ ಸೊಪ್ಪಿನ ಬೆಟ್ಟದ ದಾರ್ಯಾಗೆ ಹೋಗು, ಪಾಪ ಜೇನು ಹಿಡಿಯ್ಯಕ್ಕೆ ಆಗದೆ ಒದ್ದಾಡ್ತಾ ಇದಾರೆ" ಎಂದು ಕೂಗಿ ಹೇಳಿದಳು ಬಸ್ವಿ.

ಚೆನ್ನ ತಲೆಯ ಮೆಲೆ ಉಪ್ಪಾಕೆ ಹಣ್ಣಿನ ಚೀಲ ಹೊತ್ತುಕೊಂಡು ಜೇನು ಪೆಟ್ಟಿಗೆಗೆ ಕೂಡಿಸುತ್ತಿದ್ದ ಜಾಗಕ್ಕೆ ಬರುವಷ್ಟರಲ್ಲಿ ದೂರದಿಂದ ಯಾರೋ ಯಾರನ್ನೋ ಹಿಡಿದು ಮಲಗಿಸುತ್ತಿದ್ದುದ್ದನ್ನು ಹಾಗು ಮತ್ಯಾರೋ ಕೆಳಗಡೆ ಓಡುತ್ತಿರುವುದನ್ನು ಕಂಡ. ಉಪ್ಪಾಕೆ ಚೀಲ ಅಲ್ಲಿಯೇ ಇಳಿಸಿ ಅತ್ತ ಕಡೆ ಓಡಿದ.

* * * * *

ಹೊಗೆ

ನಾನು ಚೆನ್ನನ ಮನೆಯಿಂದ ಕನ್ನರ್ಸೆಗೆ ಬರುವಷ್ಟರಲ್ಲಿ ನಾರಾಯಣಸ್ವಾಮಿ ನನ್ನ ಬರುವಿಕೆಯನ್ನೇ ಕಾಯುತ್ತಿದ್ದ. ಮಧ್ಯಾಹ್ನ ನಾನು ಹೊರಡುವಾಗ ಅವನಲ್ಲಿದ್ದ ನಿರುತ್ಸಾಹ ಮಾಯವಾಗಿದ್ದಂತೆ ತೋರಿತು. ಕೆ.ಇ.ಬಿ.ಯವರಿಗೆ ಫೋನ್‌ಮಾಡಿ ಕರೆಂಟ್ ಲೈನ್ ಆಫ್ ಮಾಡಿಸಿಕೊಂಡು ಅಕೇಶಿಯಾ ಮರವನ್ನು ಕಡಿದು ಬಂದು ಕುಳಿತಿದ್ದ. ಕಳೆದುಹೋಗಿದ್ದ ಕತ್ತಿ ಸಿಕ್ಕಿತೆಂದು ಹೇಳಿದ. ಅದು ಸುಮಾರು ನೂರು ಅಡಿ ಆಚೆ ಬಿದ್ದಿತ್ತಂತೆ.

ಜೇನು ಪೆಟ್ಟಿಗೆ ಸಮೇತ ಎಲ್ಲಾ ಪರಿಕರಗಳನ್ನು ಕಾರಿನಿಂದ ಇಳಿಸಿ ಇಬ್ಬರೂ ಹಿಡಿದುಕೊಂಡು ಸೊಪ್ಪಿನ ಬೆಟ್ಟದ ಕಡೆ ಹೊರಟೆವು.

ರಾತ್ರಿಯಿಡೀ ಜಿಟಿಜಿಟಿ ಸುರಿದಿದ್ದ ಮಳೆ ಬೆಳಗ್ಗಿನಿಂದ ವಿರಾಮ ಪಡೆದಿತ್ತು. ಬಿಸಿಲು ಇರದಿದ್ದರೂ ಮಳೆ ಇರಲಿಲ್ಲ. ಹಾಗಾಗಿ ನಮ್ಮ ಕೆಲಸ ಅರ್ಧ ಸುಲಭವಾಗಿತ್ತು. ಮಳೆಯೇನಾದರೂ ಜೋರಾಗಿದ್ದರೆ ನಮ್ಮ ಕಾರ್ಯಕ್ರಮವನ್ನು ರದ್ದುಗೊಳಿಸುವುದು ಅನಿವಾರ್ಯವಾಗಿತ್ತು. ನನಗೆ ಅದೇನೋ ಒಂದು ದೊಡ್ಡ ಯುದ್ಧಕ್ಕೆ ಹೊರಡುತ್ತಿದ್ದ ಅನುಭವ. ನಾರಾಯಣಸ್ವಾಮಿಗೂ ಇದು ಮೊದಲನೆ ಅನುಭವವಾದರೂ ನನ್ನಷ್ಟು ಉದ್ವಿಗ್ನನಾಗಿರಲಿಲ್ಲ. ಪುಸ್ತಕದಲ್ಲಿನ ಘಟನಾವಳಿ ಯನ್ನು ಓದಿದ್ದರಿಂದ ನನಗೆ ಹಾಗಾಗುತ್ತಿರಬೇಕು ಎಂದು ಅಂದಾಜಿಸಿದೆ. ಜೇನು ಹಿಡಿಯುವುದನ್ನು ನೋಡುವ ಕುತೂಹಲದ ಜೊತೆಗೆ ನನಗೆ ಉಪಕಾರ ಮಾಡುತ್ತಿದ್ದೇನೆಂದೂ ಆತ ಯೋಚಿಸುತ್ತಿದ್ದಂತೆ ನನಗೆ ಭಾಸವಾಯಿತು.

ಸಳ್ಳೆ ಮರದ ಹತ್ತಿರ ಎಲ್ಲಾ ಹತಾರಗಳನ್ನು ಇಟ್ಟು, ನಿಧಾನ ಮರದ ಪೊಟರೆ ಬಳಿ ಹೋದೆ. ಜೇನು ಅಲ್ಲಿ ವಾಸವಾಗಿರಲಿಲ್ಲವೇನೋ ಎಂಬಷ್ಟು ಕಡಿಮೆ ಪ್ರಮಾಣದಲ್ಲಿ ಒಂದೋ ಎರಡೋ ಜೇನ್ನೊಣ ಒಳಗೆ ಹೊರಗೆ ಓಡಾಡುತ್ತಿತ್ತು. ಬೆಳಿಗ್ಗೆ ಕಾಣಿಸಿದ ಬಿಳಿ ಬಣ್ಣದ ತತ್ತಿ ಕಾಣಿಸಲಿಲ್ಲ. ಯಾರಾದರೂ ಕಿತ್ತುಕೊಂಡು ಹೋಗಿಬಿಟ್ಟರೇನೋ ಎಂಬ ಅನುಮಾನದಿಂದ ಪೊಟರೆಯ ಬಳಿ ನಿಧಾನ ಕುಳಿತು ಇಣುಕಿದೆ. ಎಲ್ಲಾ ಸುರಕ್ಷಿತವಾಗಿತ್ತು.

–ಮುಂದಿನ ಪುಟಕ್ಕೆ.

ಧಾರಾವಾಹಿ

ಒಂದು ಜೇನಿನ ಹಿಂದೆ

ಆರ್. ಶರ್ಮಾ, ತಲವಾಟ

ಬಿಳಿ ತತ್ತಿ ಕಾಣದೇ ಇರುವುದಕ್ಕೆ ಕಾರಣ ಜೇನ್ನೊಣಗಳು ಅದರ ಮೇಲೆ ಕುಳಿತುಕೊಂಡಿದ್ದವು. ರಾಣಿ ಹುಳು ಎಲ್ಲಾದರೂ ಕಾಣಿಸಬಹುದಾ ಎಂದು ನೋಡಿದೆ, ಕತ್ತಲೆಯಲ್ಲಿ ಏನೂ ಕಾಣಿಸಲಿಲ್ಲ. ಆಗ ಪುಸ್ತಕದಲ್ಲಿನ ಪರಿಕರದ ಪಟ್ಟಿಯಲ್ಲಿ ಟಾರ್ಚ್ ಏಕೆ ಬರೆದಿದ್ದಾರೆ ಎಂದು ಅರ್ಥವಾಯಿತು. ನಾರಾಯಣಸ್ವಾಮಿ ಚೀಲದಲ್ಲಿದ್ದ ಟಾರ್ಚ್ ತಂದು ಕೊಟ್ಟ, ಬೆಳಕು ಪೊಟರೆಯೊಳಗೆ ಹೋದ ತಕ್ಷಣ ಸ್ಪಷ್ಟವಾಗಿ ಎಲ್ಲಾ ಗೋಚರಿಸತೊಡಗಿತು.

ಲಕ್ಷಾಂತರ ಜೆನ್ನೊಣಗಳು ತತ್ತಿಗೆ ಜೋತುಬಿದ್ದಿದ್ದವು. ಒಂದರ ಪಕ್ಕದಲ್ಲಿ ಒಂದರಂತೆ ಸಾಲಾಗಿ ಒಟ್ಟು ಏಳು ತತ್ತಿ ಇತ್ತು. ರಾಣಿನೊಣ ಹೊರಗಡೆ ನನಗೆ ಕಾಣಿಸುತ್ತಿದ್ದ ತತ್ತಿಯಲ್ಲಿ ಇರಲಿಲ್ಲ ಬಹುಶಃ ಒಳಗಡೆ ಸೇರಿಕೊಂಡಿರಬೇಕು. ಮರದ ಪೊಟರೆ ಅಗಲ ಅರ್ಧ ಅಡಿಗಿಂತ ಕಡಿಮೆಯಿತ್ತು. ಮೊದಲು ಅದನ್ನು ದೊಡ್ಡದು ಮಾಡಿಕೊಳ್ಳಬೇಕಿತ್ತು. ಕೈಕೊಡಲಿಯ ಮೂಲಕ ಬಹಳ ಎಚ್ಚರಿಕೆಯಿಂದ ಒಂದು ಪೆಟ್ಟನ್ನು ಪೊಟರೆಯ ಬಾಯಿಗೆ ಹೊಡೆದೆ. ಆದರೆ ಮರ ಲಡ್ಡಾಗಿದ್ದಿದ್ದು ನನ್ನ ಗಮನಕ್ಕೆ ಬಂದಿರಲಿಲ್ಲ. ಹಾಗಾಗಿ ನಾನು ಅಷ್ಟೊಂದು ನಿಧಾನವಾಗಿ ಹೊಡೆದ ಹೊಡೆತವೂ ಹೆಚ್ಚಾಗಿ, ಕೊಡಲಿ ಒಳಗಡೆ ಹೋಗಿ ಜೇನು ತತ್ತಿಗೆ ತಾಕಿತು. ಮರದಬಾಯಿ ಯಾವ ಕಸರತ್ತು ಮಾಡದೆ ದೊಡ್ಡದಾಯಿತು. ಆದರೆ ತತ್ತಿಗೆ ಕೊಡಲಿಯ ಏಟು ಬಿದ್ದಿದ್ದರಿಂದ ಅದು ಅರ್ಧಕ್ಕೆ ತುಂಡಾಗಿ ಮರದೊಳಗೆ ಬಿತ್ತು. ಜೇನ್ನೊಣಗಳು ಒಮ್ಮೆಲೇ ಗಾಬರಿ ಬಿದ್ದು ಸೊಯ್ಯನೆ ಧಾಳಿ ಮಾಡಿದವು, ಕೊಡಲಿಯನ್ನು ಅಲ್ಲಿಯೇ ಕೈಬಿಟ್ಟು ನನಗೆ ಅರಿವಿಲ್ಲದಂತೆ ಕ್ಷಣಮಾತ್ರದಲ್ಲಿ ಅಲ್ಲಿಂದ ದೂರ ಓಡಿದೆ. ಆದರೂ ಒಂದು ಹುಳ ಕಣ್ಣುಹುಬ್ಬಿನ ಬಳಿ ಹೊಡೆಯಿತು. ನಾರಾಯಣಸ್ವಾಮಿಯ ಬಳಿ ಅಂಬನ್ನು ತೆಗೆಯಲು ಹೇಳಿದೆ. ಆದರೆ ಆತ ನಾನು ತಿರುಗಿ ಓಡಿದ್ದನ್ನು ನೋಡಿ ನನಗಿಂತ ಇನ್ನೂರು ಅಡಿ ದೂರ ಓಡಿಹೋಗಿ ನಿಂತಿದ್ದ. ಅವನು ನಾನಿದ್ದಲ್ಲಿಗೆ ಬರಲು ಒಪ್ಪದ ಕಾರಣ ನಾನೇ ಎಡಗೈಯಲ್ಲಿ ಹುಬ್ಬನ್ನು ತಿಕ್ಕಿಕೊಳ್ಳುತ್ತಾ ಅವನಿದ್ದಲ್ಲಿಗೆ ಹೋಗಿ ಅಂಬನ್ನು ತೆಗೆಸಿಕೊಂಡು ಸೊಪ್ಪಿನ ರಸ ಹಚ್ಚಿಕೊಂಡೆ.

"ಏಯ್ ರಾಗಣ್ಣ ಜೇನು ಸಾಯ್ಲಿ, ಇದನ್ನ ಪೆಟ್ಟಿಗೆಯಲ್ಲಿ ಕೂಡ್ತೀನಿ ಅಂತ ಹೋದ್ರೆ ಕೈಕಾಲು ಮುರಿದುಕೊಳ್ಳಬೇಕಾಗುತ್ತೆ, ಸಾಕು ಮನೆಗೆ ಹೋಗೋಣ ಬಾ" ಎಂದ ಸ್ವಾಮಿ.

"ಥೋ ಇವೆಲ್ಲಾ ಮಾಮೂಲಿ ಬಾ ಮಾರಾಯ" ಎಂದು ಬಹಳ ಅನುಭವಸ್ಥರ ತರಹ ಹೇಳಿ ಮತ್ತೆ ಮರದ ಪೊಟರೆಯ ಬಳಿ ಹೋದೆ.

ಬಿಳಿ ಬಣ್ಣದ ತತ್ತಿ ಈಗ ದೂರದಿಂದಲೇ ಕಾಣಿಸಿತು. ಎಲ್ಲಾ ಹುಳುಗಳು ತತ್ತಿಯನ್ನು ಬಿಟ್ಟಿದ್ದವು. ನಿಧಾನ ಕೊಡಲಿಯನ್ನು ಹೊರಗಡೆ ಎಳೆದೆ, ಅದರ ಬಾಯಿಗೆ ಕಚ್ಚಿಕೊಂಡ ತತ್ತಿ ಸಮೇತ ಕೊಡಲಿ ಆಚೆ ಬಂತು. ಒಂದೆರಡು ಹುಳು ಅದರ ಮಧ್ಯೆ ಸಿಕ್ಕಿ ಸತ್ತುಹೋಗಿತ್ತು. ಅವನ್ನು ನೋಡಿದ ನನಗೆ ಯುದ್ದಗಳಲ್ಲಿ ಪ್ರಾಣತ್ಯಾಗ ಮಾಡಿದ ವೀರಯೋಧರ ನೆನಪಾಯಿತು. ಅವುಗಳಲ್ಲಿಯೂ ಮಾಹಿತಿ ವಿನಿಮಯದ ತಂತ್ರಜ್ಞಾನವಿದ್ದಿದ್ದರೆ "ವೀರ ಯೋಧರ ದುರ್ಮರಣ" ಎಂಬ ಶೀರ್ಷಿಕೆಯಡಿಯಲ್ಲಿ ಸುದ್ದಿ ಬರುತ್ತಿತ್ತೇನೋ. ನಿಧಾನ ತತ್ತಿಯನ್ನು ಕೊಡಲಿಯಿಂದ ಬೇರ್ಪಡಿಸಿದೆ, ತತ್ತಿ ತೀರಾ ಅಚ್ಚ ಬಿಳಿ ಬಣ್ಣದ್ದಾಗಿರಲಿಲ್ಲ, ಸ್ವಲ್ಪ ಕಂದು ಬಣ್ಣಕ್ಕೆ ತಿರುಗಿತ್ತು. ತತ್ತಿಯ ಮೇಲ್ಭಾಗದಲ್ಲಿ ಒಂದು ಸಾಲಿನಲ್ಲಿ ಮಾತ್ರ ಸ್ವಲ್ಪ ತುಪ್ಪ ಇತ್ತು. ಮೊದಲ ಬಾರಿ ಇಷ್ಟೊಂದು ಹತ್ತಿರದಿಂದ ಜೇನುತತ್ತಿ ನೋಡಿದ ನನಗೆ ಅದರ ವಿನ್ಯಾಸ ಕಂಡು ಜೇನಿನ ಕೌಶಲ್ಯದ ಬಗ್ಗೆ ಅಪಾರ ಮೆಚ್ಚುಗೆಯನ್ನು ಮೂಡಿಸಿತು.

–ಮುಂದಿನ ಪುಟಕ್ಕೆ.

ಧಾರಾವಾಹಿ

ಒಂದು ಜೇನಿನ ಹಿಂದೆ

ಆರ್. ಶರ್ಮಾ, ತಲವಾಟ

ಷಟ್ಕೋನದ ಆಕೃತಿಯ ನೂರಾರು ಕೋಣೆಗಳು ಸಾಲಾಗಿ ನಿರ್ಮಿಸಲ್ಪಟ್ಟಿದ್ದವು. ದೂರದಿಂದ ನೋಡಿದರೆ ಸಣ್ಣ ಸಣ್ಣತೂತಿನಂತೆ ಕಾಣುವ ಅವು ಪ್ರತಿಯೊಂದೂ ಕರಾರುವಕ್ಕಾಗಿ ಒಂದೇ ಅಳತೆಯಲ್ಲಿದ್ದಿದ್ದನ್ನು ಕಂಡು ಜೇನು ನೊಣಗಳಲ್ಲಿನ ಇಂಜನಿಯರ್‌ಗಳಿಗೆ ನನಗರಿವಿಲ್ಲದಂತೆ ದೊಡ್ಡದಾಗಿ ಶಭಾಷ್ ಎಂದೆ.

ನನ್ನಷ್ಟಕ್ಕೆ ಮಾತನಾಡಿದ್ದನ್ನು ಕೇಳಿದ ಸ್ವಾಮಿ "ಏನಾಯಿತಾ?" ಎಂದ.

"ಇಲ್ಲ ಏನಿಲ್ಲ" ಎಂದು ತತ್ತಿಯನ್ನು ನೋಡಲು ಅವನಿಗೆ ಕೊಟ್ಟೆ. ಈಗ ಅವನಿಗೂ ಸ್ವಲ್ಪ ಧೈರ್ಯ ಬಂದಿತ್ತು ಹಾಗಾಗಿ ನನ್ನ ಮಾತು ಕೇಳುವಷ್ಟು ಹತ್ತಿರ ಬಂದು ನಿಂತುಕೊಂಡಿದ್ದ. ಬಹಳಷ್ಟು ಜೇನುಗಳು ಪೊಟರೆಯ ಬಾಯಿಯಲ್ಲಿ ಹಾರಾಡತೊಡಗಿದ್ದವು. ಆದರೆ ವಿಚಿತ್ರವೆಂದರೆ ಒಂದು ಹುಳವೂ ನನ್ನನ್ನು ಹೊಡೆಯುತ್ತಿರಲಿಲ್ಲ. ಜೊಂಯ್ ಎಂದು ಸದ್ದು ಮಾಡುತ್ತಾ ಒಳಗೂ ಹೊರಗೂ ಓಡಾಡತೊಡಗಿದ್ದವು. ಅವು ಯಾವುದೋ ಸುದ್ದಿಯನ್ನು ವಿನಿಮಯ ಮಾಡುತ್ತಿರುವಂತೆ ನನಗೆ ಅನಿಸಿತು. ಇನ್ನು ಹೆಚ್ಚು ಸಮಯ ವ್ಯರ್ಥ ಮಾಡಿದರೆ ಬೆಳಗಿನಿಂದ ಗಾಬರಿಯಾಗಿದ್ದ ಇಡೀ ಕುಟುಂಬ ಪರಾರಿಯಾಗಬಹುದೆಂದು, ರಾಣಿನೊಣ ಹುಡುಕಲು ಟಾರ್ಚ್ ತೆಗೆದುಕೊಂಡು ಪೊಟರೆಯೊಳಗೆ ಬೆಳಕು ಬಿಟ್ಟೆ. ಎಲ್ಲಾ ಜೇನು ನೊಣಗಳು ತತ್ತಿಯನ್ನು ಬಿಟ್ಟು ಸ್ವಲ್ಪ ದೂರದಲ್ಲಿ ತೊಪ್ಪೆಯಾಗಿ ಒಂದೆಡೆ ಕುಳಿತುಕೊಂಡಿದ್ದವು. ಅವುಗಳಲ್ಲಿ ರಾಣಿನೊಣವನ್ನು ಪತ್ತೆ ಮಾಡುವುದು ಅಸಾಧ್ಯದ ಮಾತಾಗಿತ್ತು. ಹಾಗಾಗಿ ಸ್ಟೀಲಿನ ಸೌಟನ್ನು ಬಳಸುವ ವಿಧಾನವನ್ನು ಪ್ರಯೋಗಿಸಲು ತೀರ್ಮಾನಿಸಿ ಕೂಡು ಪೆಟ್ಟಿಗೆಯನ್ನು ಪೊಟರೆಯ ಬಾಯಲ್ಲಿ ಇಟ್ಟು ನಿಧಾನವಾಗಿ ಸೌಟನ್ನು ಪೊಟರೆಯೊಳಗೆ ತೂರಿಸಿ ಜೇನುಹುಳು ಕುಳಿತಲ್ಲಿಗೆ ಸೌಟನ್ನು ಆನಿಸಿ ಹಿಡಿದು ಸ್ವಲ್ಪ ಮೇಲಕ್ಕೆ ಎತ್ತಿ ನಂತರ ಹೊರಗಡೆ ಎಳೆದುಕೊಂಡೆ. ಸೌಟಿನ ತುಂಬಾ ಹುಳುಗಳು ಬಂದಿದ್ದವು. ಅವುಗಳನ್ನು ಕೂಡು ಪೆಟ್ಟಿಗೆಯ ಬಾಗಿಲಿಗೆ ಬಿಟ್ಟೆ, ಅರ್ಧದಷ್ಟು ಹುಳಗಳು ಪೆಟ್ಟಿಗೆಯೊಳಗೆ ಸರಸರನೆ, ಒಳಗಡೆ ಯಾರೋ ಕರೆಯುತ್ತಿರುವಂತೆ ಹೋದವು, ಇನ್ನರ್ಧದಷ್ಟು ಹುಳಗಳು ಮಾತ್ರ ನಾವು ಒಳಗಡೆ ಹೋಗಲೊಲ್ಲೆವು ಎಂಬಂತೆ ಹೊರಗಡೆ ಹಾರಿದವು. ಇದೇ ರೀತಿ ಮತ್ತೊಂದು ಬಾರಿ ಮಾಡಿದೆ, ಆಗಲೂ ಅದೇ ತರಹ ಆಯಿತು. ಸ್ವಾಮಿಗೆ ಈಗ ಬಹಳ ಧೈರ್ಯ ಬಂದಿತ್ತು. ನನ್ನ ಹತ್ತಿರ ಬಂದು ಕುಳಿತು ಎಲ್ಲವನ್ನೂ ನೋಡುತ್ತಿದ್ದ.

.....ಮುಂದಿನ ವಾರಕ್ಕೆ.

ಕ್ರೀಡಾ ನೋಟ
–ಮಾ.ವೆಂ.ಸ.

ಸಚಿನ್ ನಿವೃತ್ತಿ!?

Photo help - santabanta .com

ಭಾರತೀಯರು ವಿಜಯಿಗಳಾದ ಕಾಮನ್‌ವೆಲ್ತ್ ಬ್ಯಾಂಕ್ ತ್ರಿಕೋನ ಏಕದಿನ ಸರಣಿಗೆ ಮುನ್ನ ಇಂತದೊಂದು ಪ್ರಶ್ನೆ ಹಲವರಲ್ಲಿ ಮೂಡಿತ್ತು. ರಾಹುಲ್ ದ್ರಾವಿಡ್, ಸೌರವ್ ಗಂಗೂಲಿಗೇ ಕೊಕ್ ನೀಡಿರುವಾಗ ಸಚಿನ್ ರಮೇಶ್ ತೆಂಡೂಲ್ಕರ್‌ರಿಗೆ ಮಾತ್ರ ಯಾಕೆ ಅವಕಾಶ ಎಂಬರ್ಥದ ಪ್ರಶ್ನಾರ್ಥಕ ಚಿನ್ಹೆ ಕ್ರಿಕೆಟ್ ಅಭಿಮಾನಿಗಳಲ್ಲಿತ್ತು. ಆದರೆ ಧೋನಿ ಜಾಣರು!

ಒಂದೇಟಿಗೆ ಸಚಿನ್‌ರ ಬ್ಯಾಟಿಂಗ್ ಶಕ್ತಿಯನ್ನು ಹೊಗಳಿ ಅವರು ಕೆಚಿ ಸರಣಿಯ ಫೈನಲ್ ಪಂದ್ಯಗಳಲ್ಲಿ ಬಾರಿಸಿದ ಅಜೇಯ 117, 91 ರನ್‌ಗಳ ಎರಡು ಆಟವನ್ನು ಹೆಸರಿಸಿಬಿಡಬಹುದು. ಬಹುಷಃ ಭಾರತದ ನಾಯಕ ಮಹೇಂದ್ರ ಸಿಂಗ್ ಧೋನಿಯವರಿಗೆ ರನ್‌ಗಳಿಗಿಂತ ಹೆಚ್ಚಿನ ಕೊಡುಗೆ ನೀಡುವ ಹಿರಿತಲೆಯ ಅಗತ್ಯವಿತ್ತು. ಹಾಗಾಗಿಯೇ ಅವರು ಸಚಿನ್‌ರನ್ನು ನೆಚ್ಚಿಕೊಂಡರು. ಸಚಿನ್ ಫೀಲ್ಡ್ ಜಮಾವಣೆ, ಬೌಲಿಂಗ್ ಬದಲಾವಣೆ ಮುಂತಾದ ವಿಷಯಗಳಲ್ಲಿ ನಿರಂತರವಾಗಿ ಧೋನಿಗೆ ಸಲಹೆ ನೀಡುತ್ತಿದ್ದುದನ್ನು ನಾವು ಕಾಣುತ್ತಲೇ ಬಂದಿದ್ದೇವೆ. ಅಷ್ಟೇಕೆ, ಎರಡನೇ ಫೈನಲ್‌ನಲ್ಲಿ ಸಚಿನ್ ಗಾಯಗೊಂಡು ಫೀಲ್ಡ್ ತ್ಯಜಿಸಿದ ನಂತರ ಧೋನಿ ಕೆಲವು ಫೀಲ್ಡಿಂಗ್ ನಿಯೋಜನೆಯಲ್ಲಿ ತಡಕಾಡಿದ್ದನ್ನು ಗವಾಸ್ಕರ್ ಎತ್ತಿ ತೋರಿಸಿದ್ದುಂಟು.

ಸದಾ ತನ್ನ ಬ್ಯಾಟಿಂಗ್ ಫಾರಂ ಬಗ್ಗೆ ಯೋಚಿಸಬೇಕಿರುವ, ಸದ್ಯವಷ್ಟೇ ನಾಯಕತ್ವ ಬಿಟ್ಟಾಕಿರುವ ಗೊಂದಲದ ಪರಿಸ್ಥಿತಿಯ ರಾಹುಲ್ ದ್ರಾವಿಡ್‌ರಿಂದ ಇಂತಹ ನಿರೀಕ್ಷೆ ಇಟ್ಟುಕೊಳ್ಳುವಂತಿಲ್ಲ.

–ಮುಂದಿನ ಪುಟಕ್ಕೆ.

ಕ್ರೀಡಾ ನೋಟ

–ಮಾ.ವೆಂ.ಸ.

ಸೌರವ್ ಗಂಗೂಲಿ ತಾನು ನಾಯಕನಾದರೆ ಅಧಿಕಾರಯುತವಾಗಿ ತಂಡವನ್ನು ನಡೆಸಬಲ್ಲರೇ ವಿನಃ ಬೇರೆಯವರಿಗೆ ಸಲಹೆ ನೀಡುವ ಜಾಯಮಾನದವರಲ್ಲ. ಈ ಹಿನ್ನೆಲೆಯಲ್ಲಿಯೇ ಎಂ.ಎಸ್ ಧೋನಿ ಒಬ್ಬ ಸಚಿನ್ ತಂಡದಲ್ಲಿರಲಿ ಎಂದು ಬಯಸಿದರೇ?

Photo help - santabanta .com



ಇನ್ನೊಂದು ನಿಟ್ಟಿನಿಂದ ನೋಡಿದರೆ, ಸಚಿನ್ ಗ್ರೇಟ್. ಮತ್ತೊಮ್ಮೆ ದೇಶದ ನಾಯಕತ್ವ ಸಚಿನ್‌ರನ್ನು ಹುಡುಕಿ ಬಂದಿತ್ತು. ಈ ಬಾರಿ ಸಚಿನ್‌ರಲ್ಲಿ ಜವಾಬ್ದಾರಿ ನಿರ್ವಹಿಸುವ ಪಕ್ವತೆಯೂ ಇತ್ತು. ಆರಾಮವಾಗಿ ವಹಿಸಿಕೊಳ್ಳಬಹುದಿತ್ತು. ಆದರೆ ಈತ ತನ್ನ ಉಳಿದ ದಿನಗಳ ಕ್ರಿಕೆಟ್‌ನ್ನು ಖುಷಿಯಾಗಿ ಕಳೆಯಲು ನಿರ್ಧರಿಸಿದಂತಿದೆ. ನಾಯಕತ್ವದ ದೊಡ್ಡ ಆಮಿಷಕ್ಕೆ 'ನೋ' ಅನ್ನುವುದೇ ಬೃಹತ್ ವಿಷಯ. ಏನೋ ಕಳೆದುಕೊಂಡಂತಿರುವ ದ್ರಾವಿಡ್, ತನ್ನ ವೈಭವದ ದಿನಗಳ ಮೆಲುಕಿನಲ್ಲಿರುವ ಗಂಗೂಲಿಗಿಂತ ನಿರುಮ್ಮಳ ಸಚಿನ್ ತೆಂಡೂಲ್ಕರ್ ಲಾಭಕಾರಿ ಎಂಬುದು ಮತ್ತೊಮ್ಮೆ ಶ್ರುತಪಟ್ಟಿದೆ.

ಹೇಳಿ ಕೇಳಿ ಈ ಭಾರತೀಯ ಏಕದಿನ ತಂಡ ಯುವಕರ ಸಂತೆ. ವಿವಾದಗಳನ್ನು ಬಿಡಿ. ಕೆಬಿ ಸರಣಿ ಗೆದ್ದ ನಂತರ ಎಸ್.ಶ್ರೀಶಾಂತ್, ಹರ್‌ಭಜನ್ ಸಿಂಗ್‌ರಂತವರ ಹರ್ಷೋತ್ಸವ ಎಲ್ಲೆ ಮೀರಿತ್ತು. ಈ ಮಂದಿ ಕ್ಯಾಮರಾ ಎದುರೂ ತಮ್ಮ ಎಗ್ಗುಸಿಗ್ಗಿಲ್ಲದ ಸಂತೋಷದ ರಂಪಾಟವನ್ನು ಹರಿಯಬಿಟ್ಟಿದ್ದರು. ಕ್ರಿಕೆಟ್ ಅಭಿಮಾನಿಗಳು ನೋಡಿದಂತೆ ಹಿಂದೆ ಅಜಯ್ ಜಡೇಜಾ ತೋರುತ್ತಿದ್ದ ಲವಲವಿಕೆ ಬಿಟ್ಟರೆ ಹೆಚ್ಚಿನ ಕ್ರಿಕೆಬಿಗರು ತಮ್ಮ ಭಾವನೆಗಳಿಗೆ ಬೇಲಿ ಹಾಕಿಕೊಂಡು ಬಿಪಿಕಲ್ ಜೇನಿನ ಕಾರ್ಮಿಕ ವರ್ಗದ ಹುಳುಗಳಂತೆ ಕಾಣುತ್ತಿದ್ದರು. ಈಗಿನ ಪಡೆ ವಿಭಿನ್ನ. ಆದಾಗ್ಯೂ ಇವರಿಗೆ ಲಕ್ಷಣರೇಖೆ ಹಾಕುವ ಹಿರಿತಲೆ ಬೇಕು. ಅದಕ್ಕೆ ಸಚಿನ್ ಸೂಕ್ತ. ಮೊನ್ನೆ ಏಕದಿನ ಸರಣಿ ಗೆದ್ದ ನಂತರ ಸಚಿನ್ ಹೇಳಿದ್ದರು, "ಗೆಲುವಿನ ಅಮಲಿನಲ್ಲಿ ಭವಿಷ್ಯ ಮರೆಯಬಾರದು. ಇನ್ನಷ್ಟು ಸಾಧಿಸಬೇಕಾದುದು ಇದೆ."

–ಮುಂದಿನ ಪುಟಕ್ಕೆ.

ಕ್ರೀಡಾ ನೋಟ
–ಮಾ.ವೆಂ.ಸ.

ಊಹ್ಞೂ, ಸಚಿನ್‌ರನ್ನು ಅಂಕಿಅಂಶಗಳಿಂದ ವಿವರಿಸುವ ಸಾಹಸವನ್ನು ಈ ಲೇಖನ ಮಾಡುವುದಿಲ್ಲ. ಏಕದಿನ ಕ್ರಿಕೆಟ್‌ನ ಒಟ್ಟು ರನ್, ಶತಕ...ಕೊನೆಗೆ ಪಂದ್ಯ ವ್ಯಕ್ತಿ ಪ್ರಶಸ್ತಿಯಲ್ಲಿಯೇ ಅರ್ಧಶತಕ ದಾಖಲಿದ ಕೀರ್ತಿ. ಹಾಗೊಂದು ವೇಳೆ ಅವರ ಎಲ್ಲ ಅಂಕಿಅಂಶ, ಸಾಧನೆಗಳನ್ನು ದಾಖಲಿಸುತ್ತ ಹೊರಟರೆ ಹಲವು ವಾರ ಕಂತುಗಳಲ್ಲಿ ಬರೆಯಬೇಕಾದೀತು! ಮುಖ್ಯವಾಗಿ ಆಟಗಾರನ ನಿವೃತ್ತಿಯ ಮಾತು ಎತ್ತಿದರೆ ಅಭಿಮಾನಿಗಳು ಸಿಟ್ಟಾಗುತ್ತಾರೆಂದರೆ ಅದೇ ಆಟಗಾರನ ಉಪಯುಕ್ತತೆಗೆ ಸಾಕ್ಷಿ. ಈಗಿನ ಸಚಿನ್ ಫಿಟ್‌ನೆಸ್ ನೋಡಿದರೆ ಇನ್ನೂ ಮೂರ್‍ನಾಲ್ಕು ವರ್ಷ ಅವರು ಆರಾಮವಾಗಿ ಕ್ರಿಕೆಟ್ ಆಡಬಹುದು. ಅಂದರೆ ಮುಂದಿನ ವಿಶ್ವಕಪ್ ವೇಳೆಯೂ ಬ್ಯಾಟ್ ಬೀಸುತ್ತಿರುತ್ತಾರೆಯೇ? ಸಚಿನ್‌ರ ವೈಫಲ್ಯಗಳ ಪಟ್ಟಿ ಚಿಕ್ಕದು. ನಾಯಕತ್ವದ ಸೋಲು ಒಂದೆಡೆ. ತಮ್ಮ ಕ್ಯಾರಿಯರ್‌ನಲ್ಲಿ ಒಮ್ಮೆಯೂ ವಿಶ್ವಕಪ್ ಗೆದ್ದ ತಂಡದ ಭಾಗವಾಗದಿರುವುದು ಇನ್ನೊಂದು. ಮೊನ್ನೆ ಧೋನಿಪಡೆ ಟ್ವೆಂಟಿ 20 ವಿಶ್ವಕಪ್ ಗೆದ್ದರೂ ಅದರಲ್ಲಿ ಸಚಿನ್ ಇರಲಿಲ್ಲ! ಹಾಗಾಗಿ ವಿಶ್ವಕಪ್ ಗೆಲ್ಲಿಸಿಯೇ ನಿವೃತ್ತರಾಗುವ ಹಂಬಲ ಸಚಿನ್‌ರಲ್ಲಿದ್ದರೂ ತಪ್ಪಿಲ್ಲ.

ಬಿಡಿ, ಸಚಿನ್. ಅದು ದೂರದ ಮಾತು. ನಮ್ಮ ತಾಕತ್ತನ್ನು ನಾವು ವಿಶ್ವಕಪ್ ಪ್ರಶಸ್ತಿಯಿಂದಲೇ ಅಳೆಯಬೇಕಾಗಿಲ್ಲ. ಡಾನ್ ಬ್ರಾಡ್‌ಮನ್‌ರ ಒಂದೇ ಒಂದು ಶ್ಲಾಘನೆಯ ತುಣುಕು ಸಾಕು. ಆಡುವಷ್ಟು ಕಾಲ ಈಗಿನಂತೆ ನಿರಾತಂಕವಾಗಿ ಬ್ಯಾಟ್ ಬೀಸಿ. ಇನ್ನು ಮುಂದೆ ಒತ್ತಡಗಳ ಭಾರ ನಿಮಗೆ ಬೇಡ. ಅದನ್ನು ಸುತ್ತಲಿರುವ ಯುವ ದಾಂಡಿಗರಿಗೆ ವರ್ಗಾಯಿಸಿ. ಈ ಎರಡೂ ಭಾರತಕ್ಕೆ ಒಳ್ಳೆಯದನ್ನೇ ತರುತ್ತದೆ. ವಿಶ್ವ ಚಾಂಪಿಯನ್ ಪಟ್ಟ ಭಾರತಕ್ಕೆ ದಕ್ಕದೆ ಇರದು. ಅಲ್ಲಿಯವರೆಗೆ ನಿವೃತ್ತಿಯ ಮಾತು ಬೇಡ. ನಮ್ಮಾಣೆ!

–ಮಾ.ವೆಂ.ಸ.ಪ್ರಸಾದ್
ಮಾವಿನಸರ, ಪೋಸ್ಟ್–ಎಡಜಿಗಳೇಮನೆ
ಸಾಗರ ತಾ. ಶಿವಮೊಗ್ಗ ಜಿ. 577401
ಫೋನ್ : (08183) 236068,
9886407592
emai : mavemsa@rediffmail.com